ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"ಮೊದಲನೆಯ ಖಂದ, ದೀರ್ಘ ಶೀರ್ಷಿಕೆ. ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾರ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂದ, ದೀರ್ಘ ಶೀರ್ಷಿಕೆ. ಪ್ರಸ್ತಾರವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾರದ ಅಂಗೀಕಾರ

ಶ್ರೀ ಹೆಚ್.ಬಿ. ಗೋವಿಂದೇ ಗೌಡ : (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ,. 1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಾಕ್ಷರು:ಪ್ರಸ್ತಾವ ಏನೆಂದರೆ .

"1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ತಿದ್ದುಪಡಿ ವಿಧೇಯಕ.

ಶ್ರೀ ಹೆಚ್.ಡಿ. ದೇವೆಗೌಡ (ಮುಖ್ಯಮಂತ್ರಿಯವರು): ಅಧ್ಯಕ್ಷರೇ ಕರ್ನಾಟಕ ನೀರಾವರಿ ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕ 1995ಅನ್ನು ಸಭೆಪರ್ಯಾಲೋಚಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ. ಅತ್ಯಂತ ಸರಳವಾದ ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಇದರಲ್ಲಿ ನೀರಿನ ವಿತರಣಾ ವ್ಯವಸ್ಥೆಯ ನಿರ್ವಹಣೆಗೆ ಸಂಬಂಧಪಟ್ಟಂತೆ ಉತ್ತಮ ಫಲಿತಾಂಶಗಳನ್ನು ಸಾರಿಸುವ ಸಲುವಾಗಿ , ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಸುವ) ಅಧಿನಿಯಮ, 1957ರ 10ನೇ ಪ್ರಕರಣವನ್ನು ತಿದ್ದುಪಡಿ ಮಾಡಿ, ನೀರಿನ ವಿತರಣಾ ವ್ಯವಸ್ಥೆಯ ನಿರ್ವಹಣೆ ಮತ್ತು ನೀರು ದರಗಳನ್ನು ವಸೂಲು ಮಾಡುವ ಹೊಣೆಗಾರಿಕೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆಗ ವರ್ಲ್ಡ್ ಬ್ಯಾಂಕ್‌ನವರು ಇದರಲ್ಲಿ ಒಂದೊಂದು ಬ್ಲಾಕ್ ಮಾಡಿ ಸೊಸೈಟಿ ಮಾಡಿಕೊಡುವುದು ಎಂದು ತಿಳಿಸಿದ್ದಾರೆ. ಆದ್ದರಿಂದ It is for the better water management- ಎಂದು ನಾವು ವಹಿಸಿಕೊಡುವುದು.

ಶ್ರೀ ವೈ. ರಾಮಕೃಷ್ಣ (ಆನೇಕಲ್):- ಅದು ನಾನು ಒಪ್ಪಿ ಕೊಂಡೆ ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಎಲ್ಲಾದರೂ ಇಂತಹ ಸೊಸೈಟಿಗಳು ಇವೆಯೋ ?

ಶ್ರೀ ಹೆಚ್.ಡಿ. ದೇವೇಗೌಡ : ಇದಕ್ಕೆ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ವಿದೇಶಗಳಲ್ಲಿ ವಾಟರ್ ಮ್ಯಾನೆಜ್‌ಮೆಂಟ್ ಬಗ್ಗೆ water district ಎಂದೇ ಮಾಡಿದ್ದಾರೆ. ನಿಮಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಸರಳವಾಗಿ ಮನಸ್ಸಿಗೆ ಬಂದಷ್ಟು ನೀರನ್ನು ಬಳಕೆ ಮಾಡುವಂತಹ ಪರಿಸ್ಥಿತಿ ಪ್ರಪಂಚದಲ್ಲೇ ಯಾವ ದೇಶದಲ್ಲೂ ಇಲ್ಲ. ನಾನು ಒಂದೇರಡು ವಿಷಯಗಳನ್ನು ಹೇಳಬೇಕಾಗುತ್ತದೆ. ನಾನು ಚೈನಾ ಹಾಗೂ ಯುಗೋಸ್ಲೋವಿಯಾ

ಹೀಗೆ ಒಂದೆರಡು ಕಮ್ಯುನಿಸ್ಟೆಗಳಿಗೆ ಮಾತ್ರ ಹೋಗಿಲ್ಲ. ಇವುತ್ತು ಎಲ್ಲಿ ಸರ್ಕಾರದ ಖರ್ಚಿನಿಂದ ನೀರಾವರಿ ವ್ಯವಸ್ಥೆಯನ್ನು ಮಾಡತಕ್ಕಂಥ .ಯೋಜನೆಗಳು ಇದೆಯೋ ಅಂತಹ ಯೋಜನೆಗಳ ಹಿಂಭಾಗದಲ್ಲಿ ನೀರಿನ ಬಳಕೆಯನ್ನು ಮಾಡಿಕೊಳ್ಳುತಕ್ಕಂಥ ಬಗ್ಗೆ ಅಲ್ಲಿ ಎಕನಾಮಿಕಲಿ ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ಪ್ರತಿಯೊಂದು ಹನಿ ನೀರನ್ನು ಹಾಳು ಮಾಡದೇ ಅದನ್ನು ಬಳಕೆ ಮಾಡಿಕೊಳ್ಳುವಂಥಾದ್ದಕ್ಕೆ ಮಾನಸಿಕವಾಗಿ ಸಿದ್ಧತೆಯನ್ನು ಮಾಡಿಕೊಳ್ಳುವುದರ ಬಗ್ಗೆ ಅಲೋಚನೆಯನ್ನು ಮಾಡಿ ಅನೇಕ ಕಡೆಗಳಲ್ಲಿ ಸೊಸೈಟಿಗಳನ್ನು ಮಾಡಿದ್ದೇವೆ. 500 ಅಥವಾ 2000ಎಕರೆಗೆ.ಒಂದು Irrigation District ಅಥವಾ ಕೋ-ಅಪರೇಟೀವ್ ಸೊಸೈಟಿ ಎಂದು ಮಾಡಿ ಆ ಮ್ಯಾನೇಜ್‌ಮೆಂಟ್‌ನವರಿಗೆ ನೀರನ್ನು ರಿಸರ್ವಾಯರ್‌ನಿಂದ ಅವರಿಗೆ ಕೊಡುತ್ತೇವೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಂದು) : ಅವರು ಇನ್‌ಟರ್ನ್ ಒಂದು ಸಾವಿರ ಎಕರೆಯೋ ಐದು ನೂರು ಎಕರೆಯೋ ಇದ್ದರೆ ಪ್ರತಿ ವರ್ಷ ಆ ಸೊಸೈಟಿಗೆ ನೀರಿನ ತೆರಿಗೆಯ ಹಣವನ್ನು ಕೊಡುವುದು, ಆ ಸೊಸೈಟಿಯ ಅಧ್ಯಕ್ಷ ಅಥವಾ ಪಧಾಧಿಕಾರಿಗಳು ಯಾರು ಇರುತ್ತಾರೆ ಅವರು ನಮಗೆ ಹಣವನ್ನು ಒದಗಿಸತಕ್ಕಂಥದ್ದು, ಏಕೆಂದರೆ ಈಗ ಎಲ್ಲಾ ಕಡೆ ವಿವಾದ ಇದೆ, ಏನೋ ನಮಗೆ ನೀರೇ ಕೊಟ್ಟಿಲ್ಲ. ರೆವಿನ್ಯೂ ಅಧಿಕಾರಿಗಳು ಅದನ್ನು ಸರ್ಟಿಫೈಮಾಡಬೇಕು, ಇಲ್ಲ ಅಂದರೆ ಎನ್‌ಕ್ವೈರಿ ಕಂಡಕ್ಟ ಮಾಡಬೇಕು,. ಇದೆಲ್ಲಾ ಇರತಕ್ಕಂಥ ಹಾಲೀ ವ್ಯವಸ್ಥೆಯಲ್ಲಿ ನಾನಾತರಹದ ನ್ಯೂನತೆಗಳು ಇರಬಹುದು, ರೆವಿನ್ಯೂ ಮತ್ತು ಇರಿಗೇಷನ್ ಇಲಾಖೆಯವರಿಬ್ಬರೂ ಇನ್ವಾಲ್ವ್ ಆಗಿರುವುದರಿಂದ ಈಗ ನಾವು ನೂರಾರು ಕೋಟಿ ರೂಪಾಯಿಗಳನ್ನು ವಸೂಲು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಇದನ್ನು ಬಹಳದಿನ ಮುಂದುವರಿಸಲಿಕ್ಕೂ ಆಗುವುದಿಲ್ಲ, ರಾಜ್ಯದ ಜನತೆಯಲ್ಲಿ ನಾನು ಕೈಮುಗಿದು ಪ್ರಾರ್ಥನೇ ಮಾಡಬೇಕಾಗುತ್ತದೆ, ಕೋಲಾರದಲ್ಲಿ ಅಥವಾ ಬೇರೆ ಕಡೆ ಸ್ವಂತ ಖರ್ಚಿನಲ್ಲಿ ಬಾವಿ ಹಾಕಿ ಅವನ ಕರೆಂಟ್ ಚಾರ್ಜನ್ನು ಅವನೇ ಕಟ್ಟಿಕೊಂಡು, ಸಾಲ ಮಾಡಿದಂಥ ಹಣಕ್ಕೆ ಬಡ್ಡಿ ಕಟ್ಟಿಕೊಂಡು, ಅವನ ಅರ್ಧ ಎಕರೆಗೋ. ಮುಕ್ಕಾಲು ಎಕರೆಗೋ ನೀರನ್ನು ಪಡೆದುಕೊಳ್ಳಲಿಕ್ಕೆ ಇಷ್ಟೆಲ್ಲಾ ಶ್ರಮಪಡುತ್ತಾನೆ, ನೂರಾರು ಕೋಟಿ ರೂಪಾಯಿಗಳನ್ನು, ಸಾವಿರಾರು ಕೋಟಿ ರೂಪಾಯಿಗಳನ್ನು ಇವತ್ತು ರಾಜ್ಯದ ಜನತೆಯ ಸಂಪನ್ಮೂಲದ ಹಣವನ್ನು ವಿನಿಯೋಗ ಮಾಡಿ, ಅದಕ್ಕೆ ಕನಿಷ್ಟ ಪಕ್ಷ ಮೈಟಿನೆನ್ಸ್‌ಗಾದರೂ ಹಣ ಕೊಡುವುದಿಲ್ಲ ಎಂದು ಹೇಳಿದರೆ ಇದು ಬಹಳ ಕಾಲ ಮುಂದುವರಿಸಲಿಕ್ಕೆ ಸಾಧ್ಯಾವಾಗುವುದಿಲ್ಲ, ಇದು ಸರ್ಕಾರಕ್ಕೆ ಜನಪ್ರಿಯತೆ ಕುಗ್ಗುತ್ತದೆಯೋ ಹಿಗ್ಗುತ್ತದೆಯೋ ಎನ್ನುವುದಕ್ಕೆ ಬದಲಾಗಿ ನಾನು ಸಂಪನ್ಮೂಲವನ್ನು ಹೆಚ್ಚುಮಾಡಿಕೊಳ್ಳಲೇ ಬೇಕಾಗುತ್ತದೆ. ನಮ್ಮ ರಾಜ್ಯದ ನೀರನ್ನು ನಾವು ಉಳಿಸಿಕೊಳ್ಳತಕ್ಕಂಥ ಕಾಲದಲ್ಲಿ ನಮ್ಮ ಯಾರ ರೈತಬಾಂಧವರಿದ್ದಾರೆ, ಸರ್ಕಾರದ ಪೂರ್ಣ ವೆಚ್ಚದಲ್ಲಿ ನಾವು ನೀರಾವರಿ ಯೋಜನೆಗಳನ್ನು ಮಾಡತಕ್ಕಂಥ ಕಾಲದಲ್ಲಿ ಅವರ ಮೇಲೆ ನಾವು ಕೆಲವು ದರಗಳನ್ನು ವಿಧಿಸಬೇಕಾಗುತ್ತದೆ. ಇದರೊಳಗೆ ನಾನು ಮಹಾಜನತೆಯ ಸಹಕಾರವನ್ನು ಕೋರುತ್ತೇನೆ. ಏಕೆಂದರೆ ಇವತ್ತು ಒಂದುಕಡೆ ನೀರಿನ ದರವನ್ನು ಹೆಚ್ಚುಮಾಡುವ ವಿಷಯವಿದ್ದರೆ, ಮತ್ತೊಂದು ಕಡೆ ಎಕನಾಮಿಕಲಿ ಅದನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ಸ್ವಲ್ಪ ಅರಿವಾಗಬೇಕಾಗುತ್ತದೆ. ಏಕೆಂದರೆ ನನ್ನ ಸ್ನೇಹಿತರಾದಂಥ ರೆಡ್ಡಿಯವರು ಕೋಲಾರಕ್ಕೆ ನೀರು ಕೊಡಿ ಎಂದು ಹೇಳಿದರು, ಸಾಧ್ಯ ಇದೆ, ಆದರೆ ದುರಾದೃಷ್ಟ ಏನು ಮಾಡುವುದು, ಇವತ್ತು ಶೇಕಡ ನಲವತ್ತರಷ್ಟು ನೀರು ವೇಸ್ಟಾಗಿ ಹೋಗುತ್ತಿದೆ, ಇದನ್ನು ಎಲ್ಲಿ ಬೇಕಾದರೂ ಹೋಗಿ ನೋಡೋಣ ಏಕೆ ಈ ರೀತಿ ಆಗುತ್ತದೆ ಎಂಬುದನ್ನು ಸಹ ನೋಡೋಣ, ಕ್ರಾಂಫಿಂಗ್ ಪ್ಯಾಟ್ರನ್ ವಾಯಿಲೇಟ್ ಮಾಡಿದರೆ ಅದು ಒಂದು ಕಡೆ, ವೇಸ್ಟೇಜ್ ಒಂದುಕಡೆ, ಅಮೇಲೆ ಅಷ್ಟೇ ಅಲ್ಲ ಇವತ್ತು ಆ ಹೆಚ್ಚು ನೀರನ್ನು ಬಳಕೆ ಮಾಡಿಕೊಳ್ಳದಿದ್ದರೆ ಭೂಮಿ ಹಾಳಾಗುತ್ತದೆ ಸೆಲಿನಿಟಿ ಜಾಸ್ತಿಯಾಗುತ್ತದೆ.ಕ್ರಾಪ್‌ನ ಉತ್ಪಾದನೆ

ಬಿದ್ದು ಹೋಗುತ್ತದೆ, ಇದು ಬರೀ ನಮ್ಮ ಕಡೆಯಲ್ಲ, ನಾನು ಬೇಕಾದರೆ ಎಲ್ಲಾ ಕಡೆಯೂ ಸೇರಿಸಿ ವ್ಯವಸಾಯದಲ್ಲಿ ಆಸಕ್ತಿ ಇರತಕ್ಕಂಥ ಈ ಸದನದ ಹತ್ತು ಜನರನ್ನು ಇಸ್ರೇಲಿಗೆ ಡೆಲಿಗೇಷನ್ ಕಳುಹಿಸಿಕೊಡುತ್ತೇನೆ ಅದರಿಂದ ಹಣ ವೆಚ್ಚವಾಗುತ್ತದೆ ಎಂಬುದೇನಿಲ್ಲ, ಅಲ್ಲಿ ಹೋಗಿ ನೀರು ನೋಡಿಕೊಂಡು ಬನ್ನಿ, ಇಸ್ರೇಲ್‌ನ ಅಂಬಾಸಡಾರ್‌ರವರು ನಮ್ಮನ್ನು ಮನೆಗೆ ಕರೆದರು,ಅವರ ಮನೆಯ ಕಾಂಪೌಂಡ್ ಒಳಗಡೆ ಕೆಲವು ಗಿಡಗಳನ್ನು ಹಾಕಿಕೊಂಡಿದ್ದಾರೆ, ಪ್ರತಿ ತಿಂಗಳು ಆ ಕಾಂಪೌಂಡ್ ನಲ್ಲಿರತಕ್ಕಂಥ ದಿನಗಳಿಗೆ ನೀರು ಹಾಕಲಿಕ್ಕೆ ವಾಟರ್ ಚಾರ್ಜ್ ಐದುನೂರು ಡಾಲರ್‌ಗಳು. ಆದು ಡ್ರಿಪ್ ಇರಿಗೇಷನ್ ನಮಗೆ ಮನಸ್ಸಿಗೆ ಬಂದಾಹಾಗೆ ಮಾಡುವ ಆಗಿಲ್ಲ. ಇಷ್ಟೋಂದು ಎಕನಾಮಿಕಲಿ ಆಗಿ ನೀರನ್ನು ಯೂಸ್ ಮಾಡುತ್ತಾರೆ, ನಾವು ಅವರ ಹತ್ತಿರ ಹೋಗಿ ಕಲಿತಿಕೊಳ್ಳಬೇಕು. ಸೆಂಟ್ರಲ್ ಅಮೇರಿಕಾದಲ್ಲಿ ಮೂರು ಸಾವಿರ ಅಡಿಯಿಂದ ನೀರನ್ನು ಎತ್ತಿ ಹತ್ತೂವರೆ ಲಕ್ಷ ಎಕರೆಗೆ ನೀರನ್ನು ಕೊಡುತ್ತಾರೆ, ನಾವು ಪರಿಸರವನ್ನು ಉಳಿಸಿಕೊಂಡು I can do that job. ಆದರೆ ಅರಿವು ಆಗಬೇಕಲ್ಲ, ಅದನ್ನು ನಾವು ರಾಜಕೀಯ ಮಾಡುತ್ತೇವೆ, ನಾವೇನೂ ರಾಜಕೀಯ ಮಾಡುವುದು ಬೇಡ, ಏಕೆಂದರೆ ಈ ಒಂದು ವಿಷಯವನ್ನು ಬಿಟ್ಟು ಬೇರೆ ಯಾವುದೇ ವಿಷಯದಲ್ಲಿ ನೀವು ಟೀಕೆ ಮಾಡಿ ಇದೊಂದು ವಿಷಯದಲ್ಲಿ ರಾಜಕೀಯ ಬೇಡ ನಾವೆಲ್ಲಾ ಒಟ್ಟಾಗಿ ಸೇರಿ ಈ ರಾಜ್ಯದ ನೀರನ್ನು ಉಳಿಸಬೇಕು ಎಂದಿದ್ದರೆ ಅದರ ಬಳಕೆ ಎಲ್ಲಾರಿಗೂ ಆಗಬೇಕು ಎಂದಿದ್ದರೆ, ಇದರಲ್ಲಿ ರಾಜಕೀಯ ಬೇಡ ಇದು ಯಾರ ಸ್ವತ್ತಲ್ಲ, ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಯಾರೆ ಈ ಸ್ಥಾನದಲ್ಲಿ ಕುಳಿತುಕೊಂಡರೂ ಇನ್ನು ಐದು ವರ್ಷದಲ್ಲಿ ನಾವು ಈ ರಾಜ್ಯದಲ್ಲಿ ಇರತಕ್ಕಂಥ ನೀರನ್ನು ಉಳಿಸಬೇಕು ಎಂಬುದನ್ನು ಹೇಳಿದರೆ we must all propare for that. ಅವರನ್ನು ಮೆಂಟಲಿ ನಾವು ತಯಾರು ಮಾಡಬೇಕಾಗುತ್ತದೆ, ಅಷ್ಟೇ ಅಲ್ಲ, ನಾನು ರೈತರನ್ನು ಕಳುಹಿಸುಕೊಡುತ್ತೇನೆ. ಹತ್ತು ಲಕ್ಷ ರೂಪಾಯಿ ಖರ್ಚಾದರೂ ಚಿಂತೆ ಇಲ್ಲ ಈ ರಾಜ್ಯದ ರೈತರನ್ನು ನಾನು ಕಳುಹಿಸಿಕೊಟ್ಟು ಪೇಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ ನೀರನ್ನು ಉಪಯೋಗ ಮಾಡುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಬರಲಿ ಇವತ್ತು ನಾನು ಇಸ್ರೇಲ್‌ಗೆ ಹೋಗಿ ಎಂ.ಓ.ಯು.ಗೆ ಸಹಿ ಮಾಡಿದ ಉದ್ದೇಶ, ನಮ್ಮ ಅಗ್ರಿಕಲ್ಚರ್ ಫಾರಂಸ್ ಇದ್ದಾವೆ, ಹಾರ್ಟಿಕಲ್ಚರಲ್ಸ್ ಫಾರ್ಮ್‌ಇದ್ದಾವೆ. ಅವರಿಗೆ ದೆಮೇಸ್ಟ್ರೇಷನ್ ಫ್ಲಾಟ್ಸ್‌ಕೊಟ್ಟು ಹೇಗೆ ನೀರು ಬಳಕೆ ಮಾಡುತ್ತಾರೆ ಎಂಬುದನ್ನು ಅವರಿಂದ ನಾವು ಮಾಡಿಸಿ, ನಮ್ಮ ರೈತರನ್ನು ಅಲ್ಲಿಗೆ ಕಳುಹಿಸಿಕೊಟ್ಟು ಹದಿನೈದು ಇಪ್ಪತ್ತು ದಿನಗಳಕಾಲ ಅವರು ಅಲ್ಲಿದ್ದು ಒಂದು ರೀತಿ ಅವರಿಗೆ ಅನುಭವ ಬರತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನನ್ನ ಆಸೆ ಇದೆ. ಇಷ್ಟೇ ಇದರೊಳಗೆ ಇರತಕ್ಕಂಥದ್ದು. ಇದು ಪ್ರಿಲಿಮಿನರಿ ಸ್ಟಫ್ ಅಷ್ಟೆ. ಇರಿಗೇಷನ್ ಕೋ-ಆಪರೇಟಿವ್ ಸೊಸೈಟೀಸ್ ಎಂದು ಅಂಥ ನಾವು ಮಾಡುತ್ತೇವೆ. ಅಲ್ಲಿ ಐದುನೂರು ಎಕರೆಗೆ ರೂಲ್ಸ್‌ನಲ್ಲಿ ಫ್ರೇಮ್ ಮಾಡುತ್ತೇವೆ, ಸಾವಿರ ಕರೆ ಆಗಬಹುದು ಐದುನೂರು ಎಕರೆ ಆಗಬಹುದು, ಅದು ಒಂದೊಂದು ಬ್ಲಾಕ್. ಅದಕ್ಕೆ ಅವರೇಮಾಡಿಕೊಳ್ಳಬೇಕಾಗುತ್ತದೆ. ಅದರೊಳಗೆ ಯಾರು ಪದಾಧಿಕಾರಿಗಳು ಇರುತ್ತಾರೋ ನಾವು ಅವರಿಗೆ ಬಲ್ಕ್ ವಾಟರನ್ನು ಕೊಡುತ್ತೇವೆ. ಇನ್ನು ಮುಂದೆ ಬಹಳ ದೂರ ಹೋಗಬೇಕಾಗಿದೆ. ಎಜ್ಯುಕೇಟೀವ್ ಮಾಡಬೇಕಾಗಿದೆ. ಬಲ್ಕ್ ವಾಟರ್ ಕೊಡುತ್ತೇವೆ. ಐದು ನೂರು ಎಕರೆ, ಸಾವಿರ ಎಕರಮಗೆ ಇರತಕ್ಕಂಥ ಆ ಸೊಸೈಟಿಗೆ ಇನ್‌ಟರ್ನ್ ಅವರು ನಮಗೆ ಹಣ ಕೊಡಬೇಕು ಅದನ್ನು ಹೆಚ್. ಪಿಗೆಫಿಕ್ಸ್ ಮಾಡಿದ್ದೇವೆ ಅದನ್ನು ಹೆಚ್ಚುಮಾಡಲಿಕ್ಕೆ ನಾವು ಹೋಗಲಿಲ್ಲ. The responsibility of collecting this money i.e., the water rate lies with the co-operative society so that ಅವರು ಏನು ಈ ತಕರಾರನ್ನೆಲ್ಲಾ ಮಾಡುತ್ತಿದ್ದಾರಲ್ಲಾ ನೀರೆ ಬರಲಿಲ್ಲ, ನಾವ್ಯಾಕೆ ಕೊಡೋಣ

ಇದೆಲ್ಲಾ ಏನು ಹೇಳುತ್ತಿದ್ದಾರೆ ಇದನ್ನು ಅವಾಯ್ಡ್ ಮಾಡಿ ಈಗೇನು ವರ್ಲ್ಡ್ ಬ್ಯಾಂಕ್ ಗೈಡ್‌ಲೈನ್ಸ್ ಮೇಲೆ ಇದನ್ನು ಮಾಡತಕ್ಕಂಥದಕ್ಕೆ ಒಂದು ಸಣ್ಣ ತಿದ್ದುಪಡಿ.

ಶ್ರೀ ಮತಿ ಪ್ರಮಿಳಾ ನೇಸರ್ಗಿ (ಚಾಮರಾಜಪೇಟೆ) : ಮಹಾರಾಷ್ಟ್ರದಲ್ಲಿ ಈಗೇನು ಮಾಡುತ್ತಿದ್ದಾರಲ್ಲ, ಆ ರೀತಿ ಕೋ-ಆಪರೇಟಿವ್ ಫಾರ್ಮಿಗೆ ಮಾಡುವುದು ಸೂಕ್ತ ಆದರೆ ಕೋ-ಆಪರೇಟೀವ್ ಫಾರ್ಮಿಗೆ ಮಾಡದೆ ಜಲನೀತಿಯನ್ನು ಮಾತ್ರ.

ಶ್ರೀ ಹೆಚ್.ಡಿ. ದೇವೇಗೌಡ : ಕೋ-ಆಪರೇಟೀವ್ ಫಾರ್ಮಿಂಗ್ ಅಲ್ಲ, ಅದರ ಅಗತ್ಯ ಇಲ್ಲ.

ಶ್ರೀ ವೈ. ರಾಮಕೃಷ್ಣ (ಆನೇಕಲ್): ಈಗ ಈ ಫಿಲಾಸಫಿ ಚೆನ್ನಾಗಿದೆ. ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಇದೊಂದು ಸಣ್ಣ ತಿದ್ದುಪಡಿ ಸಾಕೇ ಎಂದು ನಾನು ಕೇಳುತ್ತಿದ್ದೇನೆ. ಎರಡನೆಯದಾಗಿ ಇದು ಕಂಪಲ್‌ಸಾರಿಯೇ , ವಾಲೆಂಟರಿಯೇ ಏಕೆಂದರೆ ತಮ್ಮ ಫಿಲಾಸಫಿ ಚೆನ್ನಾಗಿದೆ ಒಪ್ಪುತ್ತೇನೆ. ಇದೊಂದು ತಿದ್ದುಪಡಿಯಿಂದ ಸಾಧ್ಯವಾಗದೇ ಇರಬಹುದು ಎಂಬ ಸ್ವಲ್ಪ ಸಂಶಯ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : ಸ್ವಾಮಿ. ನಿಮ್ಮ ಸಂಶಯ ನಿಮ್ಮ ಮನಸ್ಸಿನಲ್ಲಿ ಇದ್ದರೆ ಅದಕ್ಕೆ ಸರ್ಕಾರ ಏನೂಮಾಡುವುದಕ್ಕಾಗುರುದಿಲ್ಲ. ಮತ್ತೆ ಸದನದ ಮುಂದೆ ಬರಬೇಕಾದರೆ ನಾನು ಬರುತ್ತೇನೆ. ಒಂದನ್ನು ಮಾತ್ರ ಹೇಳುತ್ತೇನೆ. We may have to revise the water rate and see that, that should be coected for the purpose of completing the balance of irrigation works ನಾವು ಇದನ್ನು ಇನ್ನು ಬಹಳ ದೂರ ಎಳೆಯಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣಯ್ಯ(ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೇ ಸನ್ಮಾನ್ಯಮುಖ್ಯಮಂತ್ರಿಗಳು ಪ್ರಾಸ್ತಾಪ ಮಾಡಿರುವ ವಾಟರ್ ಮೈನ್‌ಟೆನೆನ್ಸ್ ಬಗ್ಗೆ ಹಾಗೂ ನೀರನ್ನು ರೈತರು ಉಪಯೋಗ ಪಡೆದುಕೊಳ್ಳುವುದರಲ್ಲಿ ಆಗತಕ್ಕಂತ ಒಂದು ವಿಚಾರ ಬಗ್ಗೆ ಒಪ್ಪಿಕೊಳ್ಳೋಣ. ರೈತರನ್ನು ವಿದ್ಯಾವಂತರನ್ನಾಗಿ ಮಾಡುವ ವಿಷಯದಲ್ಲಿ ನಾವು ಕೆಲಸ ಮಾಡಬೇಕು. ಆದರೆ ಕಾಲುವೆ ಸಿಸ್ಟಂ ಇದೆಯಲ್ಲಾ ಇವತ್ತು ಟಾನೆಲ್ ಸಿಸ್ಟಂ, ಇವತ್ತೇನು ಇರಿಗೇಷನ್ ಪ್ಲಾನ್ ಇದೆಯಲ್ಲಾ, ಆ ಸಿಸ್ಟಂನಲ್ಲಿ ಎಷ್ಟು ನೀರು ವೇಸ್ಟಾಗುತ್ತಿದೆ ಎನ್ನುವುದನ್ನು ಮೊದಲು ಯೋಚನೆ ಮಾಡಬೇಕು. ನಾವು ಇದುವರೆಗೂ ಯಾವುದೇ ಕೃಷಿ ಇಲಾಖೆ ಹಾಗೂ ನೀರಾವರಿ ಇಲಾಖೆ ಜಾಯಿಂಟಾಗಿ ಒಂದು ಟಿ.ಎಂ.ಸಿ. ನೀರಿನಲ್ಲಿ ಎಷ್ಟು ಎಕರೆ ಭತ್ತ ಬೆಳೆಯಬಹುದು. ಎಷ್ಟು ಎಕರೆ ಕಬ್ಬು ಬೆಳೆಯಬಹುದು. ಎಷ್ಟು ಎಕರೆಯಲ್ಲಿ ಇತರೆ ಬೆಳೆಗಳನ್ನು ಬೆಳೆಬಹುದು ಎಂಬುದರಲ್ಲಿ ಒಂದು ವೈಜ್ಞಾನಿಕ ವಿಚಾರ ಇದೆ. ಯಾವುದೇ ಮಡಿವೆಗಳಲ್ಲಿ ಯಾವುದೇ ಡಿಸ್ಟ್ರಿಬ್ಯೂಟರಿಗಳಲ್ಲಿ , ಹೊಸ ಅಚ್ಚುಕಟ್ಟಾಗಬಹುದು. ಹಳೆ ಅಚ್ಚುಕಟ್ಟಾಗಬಹುದು ಒಂದು ಸಮಿತಿ ಮಾಡಿ ವಿಧ್ಯಾವಂತರನ್ನಾಗಿ ಮಾಡುವಂಥ ಒಂದು ವ್ಯವಸ್ಥೆ ಸರಿ ಆದರೆ ಇಸ್ರೇಲ್‌ನಲ್ಲಿ ಇರತಕ್ಕಂಥ ಜನರನ್ನು ನಾರು ಇವತ್ತು ಕೃಷಿ ಕ್ಷೇತ್ರದಲ್ಲ ಅವಲಂಭಿತವಾಗಿರತಕ್ಕ ಜನರನ್ನು ನಮ್ಮ ಮುಖ್ಯಮಂತ್ರಿಗಳು ಹೊಂದಾಣಿಕೆ ಮಾಡಬಾರದು. ಅಲ್ಲಿ ನೂರಕ್ಕೆ ನೂರು ಪರಸೆಂಟ್ ವಿಧ್ಯಾವಂತರಿದ್ದಾರೆ. ಅಷ್ಟು ಗಂಭೀರವಾಗಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದರು ಅಲ್ಲಿ ಮಾರ್ಕೆಟ್ ವ್ಯವಸ್ಥೆ ಇದೆ. ಅಲ್ಲಿ ನೀರನ್ನು ಏನು ಟೆಕ್ನಾಲಜಿ ಇದೆ ಡ್ರಿಫೆ ಇರಿಗೇಷನ್ ಸ್ಪಿನ್‌ಕ್ಲರ್ ಅವೆಲ್ಲಾ ಬಹಳ ವಜ್ಞಾನಿಕರಾಗಿ ನಡೆಯುದುಕೊಂಡು ಬಂದಿದೆ. ಏಕೆಂದರೆ ಡ್ರಿಪ್ ಇರಿಗೇಷನನ್ನು ಕಂಡುಹಿಡಿದದ್ದು ಇಸ್ರೇಲ್‌ರವರೆ ಒಬ್ಬ ಸಾಮಾನ್ಯ ರೈತ ಅದನ್ನು ಕಂಡುಹಿಡಿದ ಆದರೆ ಅವರನ್ನು ತೆಗೆದುಕೊಂಡು ಹೋಗಿ ವಾಟರ್ ಗರೇಟ್ ಜಾಸ್ತಿ ಮಾಡತಕ್ಕಂಥ ವಿಷಯವನ್ನು

ನಾವು ಕಲಲೋಚನೆ ಮಾಡಬೇಕು. ಯಾವಾಗ ಇಸ್ರೇಲ್ ರೀತಿ ಮಾರ್ಕೆಟ್ ಸಿಸ್ಟಂ ಇದ್ದಾಗ. ವಾಟರ್ ರೇಟನ್ನು ಹೆಚ್ಚು ಮಾಡುವುದರಲ್ಲಿ , ರೈತರನ್ನು ಕರೆದು ಮಾತನಾಡುವುದರಲ್ಲಿ ಒಂದು ಎಕರೆಗೆ ಇಷ್ಟು ವರ್ಷಕ್ಕೆ ಎಂದು ಫಿಕ್ಸ್ ಮಾಡಿದರೆ ಅಭ್ಯಂತರ ಇಲ್ಲ, ನಮ್ಮ ತರಹ ಗುಲಾಮಗಿರಿ ಮಾರ್ಕೆಟ್ ವ್ಯವಸ್ಥೆ ಅಲ್ಲಿ ಇಲ್ಲ, ಇನ್ನೂ ರೈತರನ್ನು ವಿಧ್ಯಾವಂತರನ್ನಾಗಿ ಮಾಡುವಂಥ ವಿಚಾರದಲ್ಲಿ ಗಮನ ಹರಿಸಬೇಕು ಆ ವಿಷಯದಲ್ಲಿ ನಾವು ಒಂದೊಂದು ಸಮಿತಿಗಳನ್ನು ಮಾಡಿ ನೀರಿನ ಉಪಯೋಗದ ಬಗ್ಗೆ ಅಲೋಚಮೊ ಮಾಡತಕ್ಕಂಥದ್ದು ನ್ಯಾಯ ಆದರೆ ಇದರಿಂದ ಸರ್ಕಾರ ನೇರವಾಗಿ ರೈತರಿಗೆ ತೆರಿಗೆ ಹಾಕಿದರೆ ಬೈಯುತ್ತಾರೆ ಎಂದು ಹೇಳಿ, ಒಂದು ಸಹಕಾರಿ ಸಂಸ್ಥೆ ಮಾಡಿ ಅದರ ಮೂಲಕ ತೆರಿಗೆ ಹಾಕಿಸಿ ರೈತರು ಬೈಯಿಸಿಕೊಳ್ಳತಕ್ಕಂಥ ವಿಚಾರವಾಗುತ್ತದೆ ಅಷ್ಟೆ. ಇದು ನಿಜರಾಗಿಯೂ ವೈಜ್ಞಾನಿಕವಾಗಿ ಆಲೋಚನೆ ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಇಸ್ರೇಲ್‌ಗೂ, ಇಸ್ರೇಲ್‌ನಲ್ಲಿ ಇರತಕ್ಕಂತ ರೈತರಿಗೂ ನಮ್ಮ ಹಳ್ಳಿಗಾಡಿನಲ್ಲಿರತಕ್ಕಂಥ ರೈತರ ಕೃಷಿ ಕ್ಷೇತ್ರಕ್ಕೆ ಹೋಲಿಕೆ ಮಾಡಬೇಕು ವಾಟರ್ ಮೇಂಟೆನೆನ್ಸ್ ಬಗ್ಗೆ ವಿದ್ಯಾವಂತರನ್ನಾಗಿ ಮಾಡಬೇಕು ಸಮಿತಿಗಳನ್ನು ಮಾಡಬೇಕು ಎಲ್ಲಿರಿಗೂ ನೀರು ಹರಿಸತಕ್ಕಂಥ ಕೆಲಸ ಇದು ಈಗ ಹೇಮಾವತಿಯಲ್ಲಿ ಪ್ರತಿಯೊಂದು ಮಡವೆ ಹತ್ತಿರಕ್ಕೆ ಒಂದೊಂದು ಪೋಲೀಸ್ ವ್ಯಾನು ಇರುತ್ತದೆ ಹೋದಸಾರಿ ನಾವೇನಾದರೂ ಎಲ್ಲಾ ಕಡೆ ನೀರು ಹರಿಸಿದ್ದಾರೆ ಎಂದರೆ ನಮ್ಮ ಅದೃಷ್ಟಕ್ಕೆ ಎರಡು ತಿಂಗಳು ಬಿಡದಹಾಗೆ ಮಳೆಯಾಯಿತು ಇಲ್ಲದೇ ಇದ್ದರೆ ಪ್ರತಿ ಒಂದೈದು ಜನನಾದರೂ ಕೊಲೆಯಾಗುತ್ತಿದ್ದರು, ಈ ಪರಿಸ್ಥಿತಿ ಇತ್ತು. ಕೇವಲ ರೂಪಾಯಿಯಲ್ಲ ಇಪ್ಪತ್ತೈದು ಪೈಸೆ ಮಾತ್ರ ಹೇನಾವತಿಯಲ್ಲಿ ನೀರು ಹಾಯಿಸಿ ಕೊಳ್ಳಿ, ಇನ್ನು ಎಪ್ಪತ್ತೈದು ಪೈಸೆ ಇದುವರೆಗೂ ನೀರೇ ಆಗಿಲ್ಲ ಆದ್ದರಿಂದ ಮಡವೆಗಳ ಬಗ್ಗೆ ಸಮಿತಿ ಮಾಡಿ ಕ್ರಾಪಿಂಗ್ ಪ್ಯಾಟ್ರನ್ ಬಗ್ಗೆ ಹೇಳ ಬೇಕಾದರೆ ಯಾವುದು ಸೆಮಿ ಡ್ರೈ ಕ್ರಾಪ್ಸ್, ಎಂದು ನಾವು ಎಳು ಲಕ್ಷದ ಇಪ್ಪತ್ತು ಸಾವಿರ ಎಕರೆಗೆ ನೀರು ಕೊಡುತ್ತಿದ್ದೇವೆ.

ಎಲ್ಲಿ ಸೆಮಿ ಡ್ರೈ ಕ್ರಾಪ್ಸ್‌ನ್ನು ಬೆಳೆಯುತ್ತಿದ್ದೇವೇ 25 ಪರ್ಸೆಂಟ್ ತಾಳು ಮಡುವೆ ಗದ್ದೆಯಲ್ಲಿ ಭತ್ತವನ್ನುಹಾಕಿಕೊಂಡಿದ್ದಾರೆ, ಬಾಕಿಯವರಿಗೆ ಯಾರಿಗೂ ನೀರನ್ನು ಕೊಡುವುದಿಲ್ಲ. ಈ 25 ಪರ್ಸೆಂಟ್ ಬೆಳೆಯಾದರೂ ಹೇಗೆ ಆಯಿತ್ತೆಂದರೆ 2 ತಿಂಗಳ ಕಾಲ ಬರದಂತೆ ಮಳೆ ಆಯಿತು ಪ್ರಕೃತಿಯು ನಮಗೆ ಸಹಕಾರವನ್ನು ಕೊಟ್ಟಿದ್ದರಿಂದ ನಮಗೆ ಅನುಕೂಲವಾಯಿತು. ನೀರಿನ ಬಳಕೆಯ ಬಗ್ಗೆ ರೈತರನ್ನು ಎಜುಕೇಟ್ ಮಾಡಬಹುದು ಆದರೆ ರೈತರಿಗೆ ದರವನ್ನು ಜಾಸ್ತಿ ಮಾಡುತ್ತೇವೆಂದು ಹೇಳುವುದಾದರೆ ಅದಕ್ಕೆ ತಕ್ಕಂತೆ ಎಲ್ಲಾ ವ್ಯವಸ್ಥೆಯನ್ನೂ ಮಾಡಿಕೊಟ್ಟಾಗ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವುದು ಸರಿ. ಆದರೆ ಇಸ್ತೇಲ್‌ನಲ್ಲಿರತಕ್ಕ ರೈತರಿಗೂ ನಮ್ಮ ಕರ್ನಾಟಕದ ರೈತರಿಗೂ ಹೋಲಿಕೆಯನ್ನು ಮಾಡತಕ್ಕದ್ದು ಸರಿಯಲ್ಲ, ದಯವಿಟ್ಟು ದರವನ್ನು ಹೆಚ್ಚುಮಾಡುವ ವಿಚಾರವನ್ನು ಕೈಬಿಡಬೇಕು. ರೈತರನ್ನು ವಿದ್ಯಾವಂತರನ್ನಾಗಿ ಮಾಡುವುದರಲ್ಲಿ ನಾವೆಲ್ಲರೂ ಪ್ರಯತಿನ ಮಾಡಬೇಕು.ನೀರನ್ನು ಉಳಿತಾಯ ಮಾಡಿಕೊಳ್ಳುವುದರಲ್ಲಿ ಅಭ್ಯಂತರವಿಲ್ಲ, ಆದ್ದರಿಂದ ದರವನ್ನು ಹೆಚ್ಚುಮಾಡುವ ವಿಚಾರವನ್ನು ದಯವಿಟ್ಟು ಕೈ ಬಿಡಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಸಡುದ್ದೇಶದಿಂದ ನೀರಾವರಿ ಕರವನ್ನು ವಸೂಲ್ಮಾಡಲು ತಂದಿರತಕ್ಕ ವಿಚಾರವನ್ನು ನಾವೂ ಕೂಡ ಸ್ವಾಗತ ಮಾಡುತ್ತೇರೆ. ಇದರಲ್ಲಿ ಒಂದು ಅನುಮಾನಾಸ್ಪದ ವಿಚಾರ ಎಂದರೆ ಈಗಾಗಲೇ ಒಂದು ಕ್ರಾಪಿಂಗ್ ಪ್ಯಾಟ್ರನ್ ಇದೆ. ನೀರಾವರಿ ಇಲಾಖೆಯವರು ನಿಗದಿಮಾಡಿರತಕ್ಕ ಕ್ರಾಪಿಂಗ್ ಪ್ಯಾಟ್ರನ್ ಆಧಾರಗಮೇಲೆಯೇ ತಾವು ಕರವನ್ನು ವಸೂಲ್ಮಾಡುತ್ತೀರಾ ಹೇಗೆ? ಈಗಾಗಲೇ ರೈತರು ತಮ್ಮ ಮನಸ್ಸಿಗೆ ಬಂದಂಥ ಬೆಳೆಯನ್ನು ಬೆಳೆದಿರುವುದು ಹಾಲಿ ಇದೆ ಆ ಬೆಳೆಯ ಮೇಲೆ ತಾವು ಕರವನ್ನು

ನಿಗದಿಮಾಡುತ್ತೀರೋ ಅಥರಾ ನೀರಾವರಿ ಇಲಾಖೆಯವರುನಿಗದಿ ಮಾಡಿರುವ ಕ್ರಾಪಿಂಗ್ ಪ್ಯಾಟರ್ನ್ ಮೇಲೆ ತಾವು ಕರವನ್ನು ನಿಗದಿ ಮಾಡುತ್ತೀರೋ ಎಂಬುದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಈ ಕಾಯಿದೆಯನ್ನು ಜಾರಿಗೆತಂದು ತಾರು ಕರವನ್ನು ವಸೂಲ್ಮಾಡಬೇಕಾದರೆ ಈ ಎಲ್ಲಾ ಪದ್ಧತಿಗಳನ್ನೂ ತಾವು ಅಳವಡಿಸಿಕೊಳ್ಳಬೇಕಾಗುತ್ತದೆ ಎಕೆಂದರೆ. ಬಹುಶಃ ಯಾವುದೇ ಕಾಲುವೆಯಿಂದಲೂ ನೀರು ಸರಿಯಾಗ ರೀತಿಯಲ್ಲಿ ಭೂಮಿಗೆ ಹೋಗಿರುವುದಿಲ್ಲ, ಭೂಮಿಗೆ ಹೋಗುವಂಥ ನೀರೂ ಕೂಡ ಸರಿಯಾಗಿ ಹೋಗದೆ ಅಲ್ಲಿ ಬೆಳೆಯೂ ಕೂಡ ಸರಿಯಾದ ರೀತಿಯಲ್ಲಿ ಬರದೇ ಇರುವುದರಿಂದ ಅಲ್ಲಿ ನೀರಿನ ಬಳಕೆಗಾರರ ಸಂಘದವರು ಯಾವರೀತಿ ಕರವನ್ನು ವಸೂಲ್ಮಾಡುತ್ತಾರೆಂಬ ಅನುಮಾನ ಕೂಡ ಇದರಲ್ಲಿದೆ. ಒಂದು ವೇಳೆ ಅವರು ಕರವನ್ನು ವಸೂಲ್ಮಾಡಿದ್ದರೆ ಅವರ ವಿರುದ್ಧ ಯಾವ ರೀತಿ ನೀವು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನೂ ಕೂಡ ಪ್ರಮುಖವಾಗಿ ಯೋಚನೆ ಮಾಡಬೇಕಾಗಿದೆ ಆ ಸೋಸೈಟಿಯವರು ವಸೂಲ್ಮಾಡಿದ ಹಣವನ್ನು ಸರ್ಕಾರಕ್ಕೆ ಯಾವ ರೀತಿಯಲ್ಲಿ ಸಂದಾಯ ಮಾಡಬೇಕಾಗುತ್ತದೆ. ಅವರು ಎಷ್ಟು ಪರ್ಸೆಂಟ್ ಹಣವನ್ನು ಇಟ್ಟುಕೊಳ್ಳಬೇಕಾಗುತ್ತದೆ ಎಂಬ ಈ ಅನುಮಾನಸ್ಪದ ವಿಚಾರಗಳನ್ನುಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಿಸಿದರೆ ಒಳ್ಳೆಯದು.

ಶ್ರೀ ಬಿ.ಆರ್. ಯಾವಗಲ್ (ನವಲಗುಂದ): ಮಾನ್ಯ ಅಧ್ಯಕ್ಷರೇ, ಈ ನೀರಿನ ಬಳಕೆದಾರರ ಬಗ್ಗೆ ಈ ಸದನದಲ್ಲಿ ಏನು ಇವತ್ತು ಚರ್ಚೆಯಾಗುತ್ತಿದೆ ಇದರ ಬಗ್ಗೆ ಒಂದು ಸ್ಪಷ್ಟೀಕರಣ ಬೇಕಾಗುತ್ತದೆ. ನೀರು ಬಳಕೆಗಾರರ ಸಂಘ ಅವಶ್ಯಕವಾಗಿದೆ, ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಆದರೆ ಅನುಭವದಲ್ಲಿ ಈ ನೀರು ಬಳಕೆಗಾರರ ಸಂಗ ಯಾರಿಗೆ ಬೇಕು? ಆ ಕೆನಾಲ್‌ನಲ್ಲಿರುವ ಟೇಲ್ ಎಂದನಲ್ಲಿರುವವರಿಗೆ ಬೇಕೋ ಅಥವಾ ಕೊನೆಯಲ್ಲಿರುವ ಸಬ್‌ಡಿಸ್ಟ್ರಿಬ್ಯೂಟರ್ಸ್‌ಗೆ ಬೇಕೋ? ನಾನು ನನ್ನ ಅನುಭವದಲ್ಲಿ ಬಹಳಷ್ಟು ಕಡೆ ನೋಡಿದ್ದೇನೆ. ನೀರು ಬಳಕೆಗಾರರ ಸಂಘ ಮೊದಲಕ್ಕೆ ಇಲಾಖೆಯವರೇ ವಿರೋಧ ಇರುವಂಥ ಪರಿಸ್ಥಿತಿ ಬಂದಿದೆ. ಕಾರಣ ಏನೆಂದರೆ, ನೀರು ಬಳಕೆಗಾರರ ಸಂಘವನ್ನು ಮಾಡಿದಮೇಲೆ ಆ ಸಂಬಂಧಪಟ್ಟ ಕಾಲುವೆಯಲ್ಲಿ ಎಷ್ಟು ಪ್ರಮಾಣದ ನೀರನ್ನುನಿಶ್ಚಿತವಾಗಿ ಬಿಡಬೇಕೋ ಅಷ್ಟನ್ನು ಬಿಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕು. ಆದರೆ ದುರ್ದೈವದಿಂದ ಕಾಲುವೆಯಲ್ಲಿ ಅಷ್ಟು ನೀರು ಬರದೇ ಇದ್ದುದರಿಂದ ಈಗ ಈ ನೀರು ಬಳಕೆಗಾರರ ಸಂಘವನ್ನು ತಾವು ಮಾಡುತ್ತಿರುವುದರಿಂದ ಇದು ಎಷ್ಟುಮಟ್ಟಿಗೆ ಫಲಪ್ರದ ಆಗುತ್ತದೆಂದು ಯೋಚನೆ ಮಾಡಬೇಕಾಗಿದೆ. ಇದನ್ನು ನಾವು ಎನ್‌ಷೂರ್ ಮಾಡಬೇಕಾಗಿರುವುದು ಆಗತ್ಯವಿದೆ. ಈಗ ವಾಟರ್ ರೇಟನ್ನುಕೊಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಪ್ರಸ್ತಾಪ ಮಾಡಿದರು ಇದು ರೈತರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಭಾರ ಆಗುತ್ತದೆಂಬ ವಿಚಾರ ಅಲ್ಲ, ಆದರೆ ಬಹಳ ಮುಖ್ಯವಾಗಿ ಇದಕ್ಕೆ ಪೂರಕವಾಗ ಕೆನಾಲ್‌ಮುಂತಾದ ಅಗತ್ಯ ವ್ಯವಸ್ಥೆಗಳನ್ನು ಮಾಡಿ ನಂತರ ಈ ನೀರು ಬಳಕೆಗಾರರ ಸಂಘವನ್ನು ಅಸ್ತಿತ್ವಕ್ಕೆ ತಂದರೆ ಬಹಳ ಒಳ್ಳೆಯದಾಗುತ್ತದೆ. ಇವತ್ತು ಟೇಲ್ ಎಂಡರ್ಸ್ ಯಾರಿದ್ದಾರೆ, ಬಲಹೀನರು ಯಾರಿದ್ದಾರೆ ಅವರಿಗೆ ಈ ನೀರು ಸಿಕ್ಕುತ್ತಿಲ್ಲ, ಎಲ್ಲೆಲ್ಲಿ ವಾಟರ್ ಯೂಸರ್ಸ್ ಸೊಸೈಟಿಯನ್ನು ಮಾಡಿದ್ದೀರಿ ಅಲ್ಲಿ ಕನಿಷ್ಠ ಒಂದು ಪೀಕಿಗಾದರೂ ಆದು ಕ್ರಾಪಿಂಗ್ ಪಾಟರ್ನ್ ಆಗಿರಬಹುದು ಅಥವಾ ಬೇರೆ ರೀತಿಯದು ಆಗಬಹುದು ಅದಕ್ಕೆ ನೀರನ್ನು ಕೊಟ್ಟು ಬೆಳೆಯನ್ನು ಹೆಚ್ಚು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು ಇದರಿಂದ ಅವನು ಹಾಕಿದಂಥ ಇನ್‌ಪುಟ್ಸ್ ಕಾಸ್ಟ್ ಉಳಿಯುತ್ತದೆ ಅವನು ಆಳುಗಳ ಮೇಲೇ ಖರ್ಚುಮಾಡುವಂಥಾದ್ದು ಉಳಿಯುತ್ತದೆ ಇದೆಲ್ಲಾ ಒಂದುರೀತಿಯಲ್ಲಿ ರೈತರಿಗೆ ಅನುಕೂಲವಾಗುತ್ತದೆಂದು ನನ್ನ ಭಾವನೆಯನ್ನು ವ್ಯಕ್ತಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ. ಈ ನೀರಿನ ಮಿತವ್ಯಯವನ್ನು ಮಾಡಬೇಕಾದರೆ ಮಹಾರಾಷ್ಟ್ರದಲ್ಲಿ ಯಾವ ರೀತಿ ಡ್ರಿಪ್ ಇರಿಗೇಷನ್‌ಗೆ ನೂರಕ್ಕೆ ನೂರರಷ್ಟು ಸಬ್ಸಿಡಿಯನ್ನು ಕೊಟ್ಟಿದೇ ಅದೇ ರೀತಿ ನಮ್ಮ ಕರ್ನಾಟಕದಲ್ಲೂ ಸಬ್ಸಿಡಿ ವ್ಯವಸ್ಥೆಯನ್ನು ಜಾರಿಗೆ ತಂದರೆ ರೈತರು ನೀರನ್ನು ಉಳಿಸುವುದಕ್ಕೆ ಸಾಧ್ಯತೆ ಇದೆ. ಹರಿಯುರ ನೀರಿನಿಂದ ಒಂದು ಎಕರೆ ಜಮಿನಿನಲ್ಲಿ ನೀರಾವರಿಯನ್ನು ಮಾಡಿದರೆ ಡ್ರಿಪ್ ಇರಿಗೇಷನ್‌ನಿಂದ ಸುಮಾರು 4-5 ಎಕರೆ ನೀರಾವರಿಯನ್ನು ಮಾಡುವುದಕ್ಕೆ ಸಾಧ್ಯತೆ ಇರುವುದರಿಂದ ಇದರ ಬಗ್ಗೆ ಸರ್ಕಾರ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಶ್ರೀ ಮಾನ್ಯ ಅಧ್ಯಕ್ಷರೇ, ಇದೊಂದು ಸಣ್ಣ ಮಸೂದೆ. ಏಕೆಂದರೆ ಇದು ಗೌಡರು ಮಂಡಿಸಿರುವ ಮಸೂದೆ ಅವರ ಪಕ್ಕದಲ್ಲೇ ಪಟೇಲರೂ ಇದ್ದಾರೆ ಇದರಲ್ಲಿ ಬಹಳ ಗಂಬೀರವಾಗಿ ಆಲೋಚನೆ ಮಾಡಬೇಕಾದಂಥ ವಿಚಾರಗಳು ಅಡಕವಾಗಿದೆ ಮಾನ್ಯ ಮುಖ್ಯ ಮಂತ್ರಿಗಳಾದ ದೇವೇಗೌಡರು ಹಿಂದೆ ಶಾಸಕರಾಗಿದ್ದಂಥ ಸಂದರ್ಭದಲ್ಲಿ ಅಥವಾ ಲೋಕೋಪಯೋಗಿ ಖಾತೆ ಸಚಿವರಾದ್ದ ಸಂದರ್ಭದಲ್ಲಿ ನೀರಿನ ತೆರಿಗೆ. ನೀರಾವರಿ ಜಮಿನಿನ ವಾಟರ್ ಮ್ಯಾನೇಜಮೆಂಟ್, ವಿಚಾರ ಇನ್ನೂ ಮುಂತಾದ್ದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ.. ಇದೆಲ್ಲಾ ಅವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಗೊತ್ತಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಇದನ್ನು ಜಾರಿಗೆತರುವುದು ಅತ್ಯಂತ ಕಷ್ಟಕರವಾದ ಕೆಲಸ. ಇದು ಆ ಸ್ವರೂಪದಲ್ಲಿ ಬೆಳೆದುಬಿಟ್ಟಿದೆ. ಮಾನ್ಯ ಸದಸ್ಯರು ಹೇಳಿರತಕ್ಕ ಮಾತುನಿಜಕ್ಕೂ ಸತ್ಯ. ಏಕೆಂದರೆ ಇಸ್ರೇಲಿನ ರೈತರಿಗೂ ನಮ್ಮ ರೈತರಿಗೂ ಹೋಲಿಕೆ ಮಾಡುವುದು ಅಷ್ಟು ಸರಿಯಲ್ಲ. ಇನ್ನೂ ನಮ್ಮಲ್ಲಿ ಸಮಾನತೆ ಮತ್ತು ಸಾಮೂಹಿಕ ಜೀವನದ ಪರಿಕಲ್ಪನೆಗಳು ಪ್ರಬುದ್ಧಮಾನವಾಗಿ ಬೆಳೆದಿಲ್ಲ. ಯಾರ್ಯಾರಿಗೆ ಎಷ್ಟೆಷ್ಟು ಸಿಕ್ಕುತ್ತದೆ ಅಷ್ಟನ್ನೂ ಉಪಯೋಗಿಸಿಕೊಳ್ಳತಕ್ಕ ಪ್ರವೃತ್ತಿ ಬಂದುಬಿಟ್ಟರೆ. ಈಗ ಇದನ್ನು ಹತೋಟಿಗೆತರತಕ್ಕ ಕೆಲಸ ಬಹಳ ದೊಡ್ಡ ಕೆಲಸ. ಇವತ್ತು ನೀರಾವರಿಯಮೇಲೆ ನಾವು ಅಪಾರವಾದ ಹಣವನ್ನು ವೆಚ್ಚಮಾಡುತ್ತಿದ್ದೇವೆ ನೀರಾವರಿಯನ್ನು ನಮ್ಮ ಇತಿಮಿತಿಯಲ್ಲಿ ಎಷ್ಟು ವಿಸ್ತಾರ ಮಾಡಿದರೂ ನಮ್ಮ ಒಟ್ಟಾರೆ ಕರ್ನಾಟಕ ಎಲ್ಲಾ ಜಮಿನಿಗೂ ಶಾಶ್ವತವಾಗ ನೀರಾವರಿ ಪರಿಹಾರವನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ. ಹೆಚ್ಚು ಎಂದರೆ ಸುಮಾರು 50 ಲಕ್ಷ ಹೆಕ್ಟಾರ್‌ನಷ್ಟು ಭೂಮಿಗೆ ನೀರನ್ನು ನಮ್ಮ ಈಗರತಕ್ಕ ಇತಿಮಿತಿಯಲ್ಲಿ ಕೊಡಬಹುದು ಉಳಿದಿರತಕ್ಕ ಭೂಮಿ ಮಳೆಯನ್ನೇ ಆಧರಿಸಿದೆ ಇವತ್ತು ನೀರನ್ನು ಪದದಂಥ ಜನರಾದರೂ ಕೂಡ ಆದನ್ನು ಸದುಪಯೋಗಪಡಿಸಿಕೊಳ್ಳುವುದಾಗಲಿ, ಮತ್ತು ತಾವೂ ಕೂಡ ಸರ್ಕಾರಕ್ಕೆ, ಸಮಾಜಕ್ಕೆ ಕೊಡಬೇಕಾದ ತೆರಿಗೆಯನ್ನು ಪ್ರಾಮಾಣಿಕವಾಗಿ ಕೊಡುವಂಥ ವ್ಯವಸ್ಥೆಯನ್ನು ಜಾರಿಗೆ ತರಲೇಬೇಕು. ಇದಕ್ಕೆ ಬೇರೆ ಮಾರ್ಗವೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ನೀರಿನ ದರದಿಂದ ಬರತಕ್ಕ ಎಲ್ಲಾ ಹಣವನ್ನೂ ಒಟ್ಟಾರೆ ಶೇಖರಣೆ ಮಾಡಿದರೂಡಿದರೂ ಈ ವ್ಯವಸ್ಥೆಯ ಮೇಲ್ವಿಚಾರಣೆಗೂ ಸಾಲದೇ ಬರುವಂಥ ಪರಿಸ್ಥಿತಿ ಇದೆ. ಇದು ಅತ್ಯಂತ ದುರ್ದೈವ. ಇದನ್ನು ನಾವೆಲ್ಲರೂ ಬಹಳ ಜವಾಬ್ದಾರಿಯಿಂದ ಒಪ್ಪಿಕೊಳ್ಳಬೇಕು. ಇವತ್ತು ಇಲ್ಲಿ ನಾರು ಮಾತನಾಡತಕ್ಕದ್ದು ನಮ್ಮ ಮತಕ್ಷೇತ್ರದಲ್ಲಿ ಮತಗಳಿಕೆಗೋಸ್ಕರವೋ. ಅಥವಾ ದಾಕ್ಷಿಣ್ಯಕ್ಕೋಸ್ಕರವೋ ಹೊರಗ ಮಾತನಾಡುವುದನ್ನು ಬಿಡಬೇಕಾದ ಸಂದರ್ಭ ಬಂದಿದೆ. ಇವತ್ತು ನಾವು ನಿರ್ದಾಕ್ಷಿಣ್ಯವಾದ ನೀತಿಯನ್ನು ಅನುಸರಿಸಬೇಕು. ಬಹಳ ದಿವಸಗಳಿಂದ ಅಶಿಸ್ತು ಎಂಬುದು ಬೆಳೆದುಬಂದಿದೆ. ನಾವು ಯಾರೂ ತೂಬನ್ನು ಕೀಳುವಂತಿಲ್ಲ. ಕಾಲುವೆಯಲ್ಲಿನ ಕಲ್ಲಿನ್ನು ಕಿತ್ತುಹಾಕುತ್ತಾರೆ ಅಲ್ಲಿ ಹೊಡೆದಾಡಿ ಮಾಡುತ್ತಾರೆ. ಅದನ್ನೇ ಮುಚ್ಚಿಹಾಕುತ್ತಾರೆ, ಕೇಳುವುದಕ್ಕೆ ಹೋಗುವಂಥ ಇಂಜಿನಿಯರ್‌ನ್ನು ಕಟ್ಟಿಹಾಕಿ ಹೊಡೆಯುತ್ತಾರೆ. ಅಲ್ಲಿಗೆ ಯಾರೂ ಹೋಗುವುಂತಿಲ್ಲ, ಕೇಳುವಂತಿಲ್ಲ, ಯಾರ್ಯಾರಿಗೆ ಕೈ ಬಲ ಇದೆ ಅವರು ಹೋಗಿ ಹೊಡೆಯುತ್ತಾರೆ. ಇದಕ್ಕೆ ನಾವು ಯಾರನ್ನು ನಿಂದನೆ ಮಾಡೋಣಯ.

ಯಾರನ್ನು ಬೈಯೋಣ? ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಂದನೆ ಮಾಡುವುದಕ್ಕೆ ಹೋದರೆ..

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ ಯಾವ ಇಂಜಿನಿಯರ್‌ಗಳ ಈ ನೀರನ್ನು ಯಾವರೀತಿ ಉಪಯೋಗಮಾಡಬೇಕಂಬ ಬಗ್ಗೆ ಒಂದು ಸಮಿತಿಯನ್ನು ಮಾಡಿ ಅವರನ್ನು ಕರೆಸಿಕೊಂಡು ಮಾತನಾಡಿಲ್ಲ. ನಿಮ್ಮ ಇಂಜಿನಿಯರ್‌ಗಳು ರೈತರ ಜೊತೆ ಬಂದು ಒಳ್ಳೆಯ ಸಂಪರ್ಕವನ್ನು ಇಟ್ಟುಕೊಂಡರೆ ಆ ಇಂಜಿನಿಯರ್‌ಗಳನ್ನು ಹಿಡಿದುಕೊಂಡು ಹೊಡೆಯ ಬೇಕೆಂದು ಯಾರೂ ಹೋಗುವುದಿಲ್ಲ. ಏಕೆಂದರೆ, ಪ್ರತಿಯೊಬ್ಬ ಇಂಜಿನಿಯರ್‌ಗಳೂ ಕೂಡ ನಾನು ಬಹಳ ದೊಡ್ಡವನು. ಯಾರೋ ಒಬ್ಬ ಹರಕಲು ಚಿಡ್ಡಿಯನ್ನು ಇಟ್ಟುಕೊಂಡು. ಅಥವಾ ಪಂಚೆಯನ್ನು ಉಟ್ಟುಕೊಂಡು ನೀರನ್ನು ಕಟ್ಟುತ್ತಿರುವವ ಜೊತೆ ನಾನೇಕೆ ಮಾತನಾಡಬೇಕು ಎಂಬ ಭಾವನೆಯಿಂದ ರೈತರೂ, ಇಂಜಿನಿಯರ್‌ಗಳೂ ಅಜಗಜಾಂತರ ದೂರದಲ್ಲಿರುವುದರಿಂದ, ಈರೀತಿ ಆಗುತ್ತಿದೆಯೇ ಹೊರತು ಬೇರೆ ಕಾರಣದಿಂದಲ್ಲ. ಅದೇ ಇಂಜಿನಿಯರ್‌ಗಳು ಬಂದು ನೀರಿನ ಪರಿಸ್ಥಿತಿ ಈರೀತಿ ಇದೆ . ನಾವೆಲ್ಲರೂ ಸೇರಿ ನೀರನ್ನು ಈರೀತಿ ಉಪಯೋಗಿಸಿಕೊಳ್ಳಬೇಕೆಂಬ ಭಾವನೆಯಿಂದ ಎಂದೂ ಕೆಲಸಮಾಡಿಲ್ಲ. ರೈತರು ಎಂದರೆ ಸಿಕ್ಕಾಪಟ್ಟೆ ಒರಟರು. ಹೊಡೆಯುತ್ತಾರೆ ಎಂದು ಹೇಳುವುದು ಸರಿಯಲ್ಲ ಅವರೂ ಮೃದುಸ್ವಭಾವದವರು. ಆದರೆ ಅವರ ಹತ್ತಿರ ಯಾವ ಇಂಜಿನಿಯರ್‌ಗಳೂ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳುವ ಭಾಷೆಯೂ ನನಗೆ ಅರ್ಥವಾಗುತ್ತದೆ. ಅದೇ ರೀತಿ ನಾನು ಹೇಳುವ ಭಾಷೆಯನ್ನೂ ನೀವು ಅರ್ಥಮಾಡಿಕೊಳ್ಳಿ. ಇಂಜಿನಿಯರ್‌ಗಳು .ಯಾರೂ ದೇವಲೋಕದಿಂದ ಇಳಿದುಬಂದಿರುವವರಲ್ಲ.

8.00 ಪಿ.ಎಂ.

ಇದು ಮನೆಯಲ್ಲಿ ಬೆಳೆದು ಅವರು ಜಗಲಿ ತೊಳೆದು ಸಗಣಿ ಬಾಚಿ ಇದೇ ಬುತ್ತಿಯನ್ನು ತಿಂದು ಅವರೂ ಬಂದವರು. ಏನೋ ಇವತ್ತು ಪೇಟೆ ಸೇರಿದೆ ಎಂದು ಪ್ಯಾಂಟ್ ಹಾಕುತ್ತಾರೆ. ಅಥವಾ ಹೆಚ್ಚು ಬುದ್ದಿವಂತ ಎಂದರೆ ಇಂಗ್ಲೀಷ್ ಮಾತನಾಡುತ್ತಾನೆ. ಇವತ್ತು ಅವನು ಕೆಟ್ಟವನು ಇರಬಹುದು. ಅವನನ್ನು ಕೊಲೆ ಮಾಡುವುದರಿಂದ ಈ ವ್ಯವಸ್ಥೆಯನ್ನು ಸರಿಪಡಿಸುತ್ತೇವೆ ಎಂಬ ಬರವಸೆ ನಿಮಗೆ ಇದೆಯೇ? ಇಲ್ಲ, ಆದ್ದರಿಂದ ಇವತ್ತು ಈ ದೇಶದಲ್ಲಿ ನಡೆಯುವಂತಹ ಚಳುವಳಿ ಸಮಾಜವನ್ನು ಪರಿವರ್ತನೆ ಮಾಡತಕ್ಕದ್ದು. ಈ ಶಾಸನ ಏನು ಇದೆ ಇದನ್ನು ನಾವು ಈ ಶಾಸನ ಸಭೆಯಲ್ಲಿ ರಚನೆ ಮಾಡುತ್ತೇವೆ. ನಾವವು ಮಾಡಿದಂಥ ಶಾಸನದಿಂದ ನಮ್ಮನ್ನೇ ನಾವು ಬಂಧಿಸಿಕೊಳ್ಳುತ್ತೇವೆ. ಆ ರೀತಿಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಇದ್ದೇವೆ. ಆದ್ದರಿಂದ ನಾವು ಇಲ್ಲಿ ಕುಳಿತು ತೀರ್ಮಾನ ಮಾಡೋಣ. ಇಂಜಿನಿಯರ್ ಹೇಗೆ ನಡೆದುಕೊಳ್ಳಬೇಕು. ಇಂಜಿನಿಯರ್ ಹೇಗೆ ಜನರ ಜೊತೆ ಸಹಕರಿಬೇಕು. ಅದನ್ನೆಲ್ಲಾ ವ್ಯವಸ್ಥೆ ಮಾಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕಂದಾಯ ವಸೂಲು ಮಾಡುವುದಕ್ಕೆ, ಪಹಣಿ ಬರೆಯುವುದಕ್ಕೆ ನೀರಾವರಿ ಇಲಾಖೆ, ರೆವಿನ್ಯೂ ಇಲಾಖೆ, ಎಲ್ಲಾ ಸೇರಿ ಬರೆಯಬೇಕೆಂದು ಒಂದು ನಿಯಮ ಇದೆ. ಇದೊಂದು ಕೆಲಸ ಮಾಡುತ್ತಾರಾನೋಡಿ. ಇಬ್ಬರೂ ವಿದ್ಯಾವಂತರು. ರೈತರೋನೋ ಸ್ವಲ್ಪ ದಡ್ಡರಿರಬಹುದು. ಆದರೆ ಇವರಿಬ್ಬರೂ ವಿದ್ಯಾವಂತರು. ಯಾವತ್ತಾದರೂ ಪಹಣಿ ಬರೆದಿದ್ದೇವೆ ಎಂದು ಹೇಳಿದರೆ ಒಪ್ಪಿಕೊಳ್ಳಬಹುದು. ಅವರು ಬರೆದಿಲ್ಲ. ಏನೂ ಓದುವುದಿಲ್ಲ. ನೋಡುವುದಿಲ್ಲ. ಮಾಡುವದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೆ ಕಾರಣ ಏನಾಗಿದೆ ನೀರಿನ ದರವನ್ನು ಬರೆಯುವುದಾಗಲಿ, ಪಹಣಿ ಬರೆಯುವುದಾಗಲಿ. ದಾಖಲೆ ಕೊಡುವುದಾಗಲಿ ಅದಕ್ಕೆಲ್ಲಾ ಒಂದು ನಿಯಮಾವಳಿಯನ್ನು ನಾವು ರಚನೆ ಮಾಡಿಕೊಂಡಿದ್ದೇವೆ. ಆ ನಿಯಮಾಳಿಯಲ್ಲಿ ಇರತಕ್ಕ ತಪ್ಪಿನ ಕಾರಣಕ್ಕಾಗಿ ಇವತ್ತು ಇದೆಲ್ಲಾ ನಡೆಯುತ್ತಿದೆ. ಸರ್ಕಾರದ ಕಾನೂನು ಇದೆ. ಒಬ್ಬ ವಿಲೇಜ್ ಅಕೌಂಟೆಂಟ್ ಅದೇ ಗ್ರಾಮದಲ್ಲಿ ಜೀವನ ಮಾಡಬೇಕು. ಅದೇ ಗ್ರಾಮದಲ್ಲಿ ವಾಸ ಮಾಡಬೇಕು ಎಂದು ಇದೆ. ಆದರೆ ಅವನು ಅಲ್ಲಿ ವಾಸ ಮಾಡುತ್ತಿಲ್ಲ. ವಾಸ ಮಾಡದೇ ಇರುವುದಕ್ಕೆ ಕಾರಣ ಯಾರು? ಸರ್ಕಾರ ನಡೆಸುವವರು ಸರ್ಕರದಲ್ಲಿ ಇರತಕ್ಕವರು ಅದಕ್ಕೆ ನಮ್ಮ ಕಾನೂನನ್ನು ನಾವು ಚಾಲಾಯಿಸತಕ್ಕ ಕೆಲಸವನ್ನು ಮೊದಲು ಮಾಡಬೇಕು. ಏಕೆಂದರೆ ಇವತ್ತು ಏನೋ ಮಾಡಿದೆವು ಅನ್ನಿ. ನಾಳೆ ಏನ್ರಿ ನಮ್ಮ ಹುಡುಗ ಒಬ್ಬ ವಿಲೇಜ್ ಅಕೌಂಟೆಂಟ್ ಊರಿನಲ್ಲಿ ಇರುವುದಕ್ಕೆ ಆಗುವುದಿಲ್ಲ. ಅಲ್ಲಿ ಮನೆ ಸಿಗುವುದಿಲ್ಲ ಎಂದೂ ಪೇಟೆಯಲ್ಲಿ ಇದ್ದರೆ ಅವನನ್ನು ಟ್ರಾನ್ಸ್‌ಫರ್ ಮಾಡಿಕೊಡಿ ದೇವೇಗೌಡರೇ ಅಂದರೆ ನೀವು ಮಾಡಿಕೊಡಲಿಲ್ಲ. ಈಗ ನೀವು ಓಟಿಗೆ ಬಂದುಬಿಟ್ಟಿರಾ ಎಂದು ಹೇಳುತ್ತಾರೆ. ಈ ರೀತಿ ಕೇಳದ ಸ್ಥಿತಿಯನ್ನು ನಾವೇ ಉಂಟು ಮಾಡಿಕೊಂಡಿದ್ದೇವೆ. ಇದನ್ನು ನಾನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಹೇಳಿರತಕ್ಕದ್ದು ನಿಜ, ಒಪ್ಪುತ್ತೇನೆ, ಅದಕ್ಕೋಸ್ಕರ ಅದನ್ನು ಸರಿಪಡಿಸಿಕೊಳ್ಳಬೇಕು. ಯಾರು ಯಾರು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಅಧಿಕಾರಿಗಳು ಇರುತ್ತಾರೆ ಅವರ ಕರ್ತವ್ಯವನ್ನು ನಿರ್ವಹಿಸತಕ್ಕ ಕೆಲಸವನ್ನು ಅವರಿಗೆ ಚಾಚೂ ತಪ್ಪದೆ ಮಾಡಬೇಕೆಂದು ಕಡ್ಡಾಯವನ್ನು ನಾವು ಇವತ್ತು ಹಾಕಬೇಕು. ಏಕೆಂದರೆ ರೈತರೂ ಕೂಡ ಬಹಳ ಸೂಕ್ಷ್ಮಮತಿಗಳಾಗಿದ್ದಾರೆ. ಬುದ್ಧಿವಂತರಾಗಿದ್ದಾರೆ, ಸಂಘಟಿತರಾಗಿದ್ದಾರೆ, ಪ್ರಜ್ಞಾವಂತರಾಗಿದ್ದಾರೆ, ವಿದ್ಯಾವಂತರಾಗುತ್ತಿದ್ದಾರೆ. ತಮ್ಮ ಹಕ್ಕಿನ ಬಗ್ಗೆ ಕೇಳತಕ್ಕ ಸ್ಥಿತಿಗೆ ಬಂದಿದ್ದಾರೆ. ಅಂತಹ ಸ್ಥಿತಿ ಬಂದಾಗಲೂ ಕೂಡ ನಮ್ಮ ಊರಿನಲ್ಲಿ ಇರತಕ್ಕ ಒಬ್ಬ ವಿಲೇಜ್ ಅಕೌಂಟೆಂಟ್ ನಮ್ಮ ಮಾತು ಕೇಳದಿದ್ದರೆ ಕಾನೂನು ಪ್ರಕಾರ ನಡೆದುಕೊಳ್ಳದಿದ್ದರೆ ಅವನ ಬಗ್ಗೆ ಯಾವ ರೀತಿ ನೋಡಿಕೊಳ್ಳಬೇಕೆಂಬುದನ್ನು ನಾವು ಆಲೋಚನೆ ಮಾಡತಕ್ಕ ಕಾಲ ಬಂದಿದೆ. ಅದಕ್ಕೆ ಪರಿಹಾರ ಹುಡುಕಬೇಕಾಗಿದೆ. ನಾವು, ನೀವು ಸೇರಿ ಸದನದಲ್ಲಿ ಎಲ್ಲರೂ ಸೇರಿ ನಾವು ಹಿಂದೆ ಎಂದೋ ಮಾಡಿದ ಪಹಣಿ ಬರೆಯತಕ್ಕದ್ದು ಏನಿದೆ ಅದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್ ಮಾಡಿ ಎಷ್ಟು ದಿನವಾಗಿದೆ? ಲ್ಯಾಂಡ್ ರೆವಿನ್ಯೂ ರೂಲ್ಸ್ ಮಾಡಿ ಎಷ್ಟು ದಿನವಾಗಿದೆ? ನಾವ್ಯಾರಾದರೂ ನೋಡಿದ್ದೇವೆಯೇ? ಸಮಗ್ರವಾಗಿ ಪರಿಶೀಲನೆ ಮಾಡಿದ್ದೇವೆಯೇ? ಇರಿಗೇಷನ್ ಆಕ್ಟ್ ಮಾಡಿ ಎಷ್ಟು ದಿನವಾಗಿದೆ? ರವಿ ಹಾಕತಕ್ಕ ಪದ್ಧತಿ ಬಂದು ಎಷ್ಟು ದಿನವಾಗಿದೆ? ಕಾನೂನು ಮಾಡಿದಾಗ ಇಷ್ಟು ದೊಡ್ಡ ಪ್ರಮಾಣದಲ್ಲಿ ನೀರಾವರಿ ಜಮೀನು ಇತ್ತೇ? ಇಷ್ಟು ಜವಾಬ್ದಾರಿ ಇತ್ತೇ? ಈ ಸ್ವಭಾವ ಜನರಲ್ಲಿ ಬೆಳೆದಿತ್ತೇ? ಅಧಿಕಾರಿಗಳಲ್ಲೂ ಸ್ವಭಾವ ಬೆಳೆದಿರಲಿಲ್ಲ. ನೀರಿನ ಬಳಕೆದಾರರಲ್ಲಿ ಸ್ವಭಾವ ಬೆಳೆದಿರಲಿಲ್ಲ. ಇವತ್ತು ಬದಲಾದ ಪರಿಸ್ಥಿತಿಯಲ್ಲಿ ನಿಯಂತ್ರಣ ಮಾಡಲೇಬೇಕಾದರೆ ಹೊಸ ಹೊಸ ಕಾನೂನುಗಳನ್ನು ನಿಯಮಗಳನ್ನು ಜಾರಿಗೆ ತರಬೇಕಾದ ಅಗತ್ಯ ಜರೂರಾಗಿದೆ. ನೀವು ಹೇಳತಕ್ಕ ಮಾತು ಜನರು ಅನುಸರಿಸಿ ಹೋಗಲೇಬೇಕು. ಆದ್ದರಿಂದ ಈ ವ್ಯವಸ್ಥೆಯನ್ನು ಸ್ವಲ್ಪ ಬದಲಾವಣೆ ಮಾಡಬೇಕು. ತಾವು ಹೇಳತಕ್ಕದ್ದನ್ನು ನಾನು ಒಪ್ಪುತ್ತೇನೆ. ಇವತ್ತು ನಾವು ತೆರೆದ ಮನಸ್ಸಿನಿಂದ ಆಲೋಚನೆ ಮಾಡಬೇಕಾಗಿದೆಯೆಂದು ನಾನು ಹೇಳುತ್ತೇನೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಹಿಂದೆ ಅವರು ಲೋಕೋಪಯೋಗಿ ಸಚಿವರು ಆಗಿದ್ದಾಗ ನಾನು ವಿಧಾನ ಪರಿಷತ್ತಿನಲ್ಲಿ ಒಂದು ಮಾತು ಹೇಳಿದ್ದೆ. ನೀರಾವರಿ ತೆರಿಗೆ ರೈತರಿಗೆ ಬಹಳ ದೊಡ್ಡ ಹೊರೆಯಾಗಿದೆ. ನಮ್ಮ ಇಂಜಿನೀಯರ್‌ಗಳು ಕಲಿತು ಬಿಟ್ಟಿದ್ದು? water made available and supplied ಎಂಬ ಒಂದು ಪದ

ಇದ್ದು ಬಿಟ್ಟಿದೆ. ಇವರು ಏನು ಅಚ್ಚುಕಟ್ಟು ಲಿಸ್ಟು ಇಟ್ಟುಕೊಳ್ಳುವುದು, ಪಹಣಿಯಲ್ಲಿ ಆ ನೀರು ಹೋಯಿತೋ ಬಿಟ್ಟಿತೋ, ಕಾಲುವೆ ಇದೆಯೋ ಇಲ್ಲವೋ, ಎಂಬುದನ್ನು ನೋಡದೆ ವಾಟರ್ ಸಪ್ಲೈಡ್ ಎಂದು ಮಾಡಿ ಡಿಮ್ಯಾಂಡ್ ರಿಜಿಸ್ಟರಿನಲ್ಲಿ ಏನಿದೆಯೋ ಆ ಎಲ್ಲಾ ಡಿಮ್ಯಾಂಡ್ ಕಳುಹಿಸಿರುವುದು. ಅದರಿಂದಲೇ ರೈತರ ಚಳುವಳಿ ಹುಟ್ಟಿತು. ನರಗುಂದ ಚಳುವಳಿ ಹುಟ್ಟಿದ್ದು ಅದಕ್ಕಾಗಿ. ಅಲ್ಲಿ ಕಾಲುವೆ ಇಲ್ಲ, ನೀರು ಹೋಗಲಿಲ್ಲ, Water made available and supplied ಎಂದು ಪಹಣಿ ಇಟ್ಟುಕೊಂಡರು. ಎಲ್ಲಾ ತೆರಿಗೆ ಹಾಕಿದರು, ಡಿಮ್ಯಾಂಡ್ ಕಳುಹಿಸಿದರು. ಆಮೇಲೆ ಹೊಡೆದಾಟ ಆಯಿತು. ತಹಶೀಲ್ದಾರರನ್ನು ಕೊಂದರು. ಇದೆಲ್ಲಾ ಆಯಿತು. ಈಗ ಆ ಪರಿಸ್ಥಿತಿ ಮತ್ತೆ ಉಲ್ಬಣವಾಗಬಾರದು. ಏಕೆಂದರೆ ಇವತ್ತು ನೀರು ಚಿನ್ನಕ್ಕೆ ಸಮಾನವಾಗಿದೆ. ನೀರು ಒಂದಿದ್ದರೆ ಕೃಷಿಕರಿಗೆ ಏನಾದರೂ ಬೆಳೆಯಬಹುದು. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ನಾವು ಬಳಕೆ ಮಾಡತಕ್ಕ ನೀರು .....

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು ಇಷ್ಟೆಲ್ಲಾ ಸುಂದರವಾಗಿ ಮಾತನಾಡುತ್ತಿದ್ದೀರಿ. ರೈತರ ಚಳುವಳಿ ಎಲ್ಲಿ ಹುಟ್ಟಿತು ಎಂದು ಹೇಳುತ್ತಿದ್ದೀರಿ. ನಾನು ಹೇಳುವುದನ್ನು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಿ. ನಾನು ಮಾತನಾಡತಕ್ಕ ಪ್ರಸಂಗ ಬಂದರೆ ಮಾತನಾಡುತ್ತೇನೆ. ನಾನು ನಿಮ್ಮನ್ನು ನೇರವಾಗಿ ಪ್ರಶ್ನೆ ಮಾಡುತ್ತೇನೆ, ನಾನು ನಾಲ್ಕು ಎಕರೆ ಜಮೀನಿನಲ್ಲಿ ಕಡಲೇ ಕಾಯಿ ಬೆಳೆದು ಬಹಳ ಚೆನ್ನಾಗಿ ಬೆಳೆಯಬೇಕೆಂದು ಆಸೆ ಇಟ್ಟುಕೊಂಡಿದ್ದೆ. ಹನ್ನೆರಡು ಸಾವಿರ ರೂಪಾಯಿ ಖರ್ಚು ಮಾಡಿ ಸ್ವಂತ ಶ್ರಮ ಮಾಡಿ ಬೆಳೆದು , ಮಳೆ ಬಂತು ನಾಲ್ಕು ಸಾವಿರ ರೂಪಾಯಿ ಕೈಗೆ ಸಿಕ್ಕಿತು. ಮೊನ್ನೆ ಒಂದು ಲೋಡ್ ಬೂದುಗುಂಬಳ ಕಾಯಿ ಬೆಂಗಳೂರಿಗೆ ತಂದೆ. ಕೈಯಿಂದ 50 ರೂಪಾಯಿ ಬಾಡಿಗೆ ಕೊಟ್ಟೆ. ನಮ್ಮ್ ಅಪ್ಪ ಏನೋ ರೈಸ್ ಮಿಲ್ ಇಟ್ಟಿದ್ದ. ಮಿಲ್ ನಲ್ಲಿ ಅಕ್ಕಿ ಇತ್ತು. ಊಟ ಮಾಡಿದೆ. ಆದರೆ ಬಡ ರೈತ ನನ್ನಂತೆ ಕಡಲೆಕಾಯಿ ಬೆಳೆದಿರುವವನು ಏನು ಮಾಡಬೇಕು? ಇವತ್ತು ಬೂದುಗುಂಬಳ ಕಾಯಿಯಲ್ಲಿ ಆದ ನಷ್ಟವನ್ನು ಕಟ್ಟಿಕೊಡುವುದಕ್ಕೆ ನಿಮ್ಮಿಂದ ಸಾಧ್ಯವೇ? ತಾವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ರೈತರಿಗೆ ಆದ ನಷ್ಟವನ್ನು ಯಾರ ಕೈಯಲ್ಲಿ ತುಂಬುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿರತಕ್ಕ ನೀರನ್ನು ಉಪಯೋಗಿಸಿ ಸಮೃದ್ಧ ಆಹಾರ ಪದಾರ್ಥಗಳನ್ನು ಬೆಳೆಯುವುದರಲ್ಲಿ , ಕಬ್ಬನ್ನು ಬೆಳೆಯುವುದರಲ್ಲಿ ಪ್ರಪಂಚದಲ್ಲೇ ಮೊದಲ ಸ್ಥಾನವನ್ನು ಬೆಳೆಸಿದ್ದೇವೆ. ಎಲ್ಲರಿಗೂ ಆಹಾರ ಪದಾರ್ಥಗಳನ್ನು ಬೆಳೆದು ಕೊಡುತ್ತಿದ್ದೇವೆ. ವಾಟ್ ಮೈಂಟೇನೆನ್ಸ್ ಬಗ್ಗೆ ಬೇರೆ ಮಾತು ಇಲ್ಲ. ಆದರೆ ನೀರಾವರಿ ತೆರಿಗೆ ಹೆಚ್ಚಿಗೆ ಮಾಡಬೇಕಾದರೆ ಯಾವುದೇ ತೆರಿಗೆ ಹೆಚ್ಚಿಗೆ ಮಾಡಬೇಕಾದರೆ ಮೊದಲು ಮಾರುಕಟ್ಟೆ ವ್ಯವಸ್ಥೆ ಮಾಡಿ.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾರುಕಟ್ಟೆ ಕಡಿಮೆ ಇದೆಯೆಂದು ಬೆಳೆಯುವುದು ಬಿಟ್ಟಿದ್ದೀರಾ? ನಾವು ಎಲ್ಲರಿಗೂ ಸಮಾನತೆ ಇರಬೇಕು ಎನ್ನುವವರು. ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ? ಕೋಲಾರ ಜಿಲ್ಲೆ ಆಗಿರಬಹುದು, ತುಮಕೂರು ಜಿಲ್ಲೆ ಆಗಿರಬಹುದು, ಅಥವಾ ನಮ್ಮ ಬೆಂಗಳೂರು ಜಿಲ್ಲೆ ಆಗಿರಬಹುದು ಅಥವಾ ಬಿಜಾಪುರದ ಕೆಲವು ಭಾಗಗಳಾಗಿರಬಹುದು. ಕೆಲವು ಕಡೆ ಬೋರ್‌ವೆಲ್ ಗಳಿಗೆ 400 ಅಡಿ ಆಳ ಹೋಗಬೇಕು. 70, 75 ಸಾವಿರ ರೂಪಾಯಿ ಒಂದು ಬೋರ್‌ವೆಲ್‌ಗೆ ಬೀಳುತ್ತದೆ. ಅದೂ ಗ್ಯಾರಂಟಿ ಇಲ್ಲ, ಎಷ್ಟು ಎಕರೆಗೆ ನೀರು ಬರುತ್ತದೆ ಎಂದು. ಎರಡು ಎಕರೆಗೆ ಬಂದರೆ ಬಂತು, ಆರು ತಿಂಗಳಾದ ಮೇಲೆ ಒಣಗಿ ಹೋದರೂ ಹೋಯಿತು. ಇಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. 70 ಸಾವಿರ ರೂಪಾಯಿಗಳಿಗೆ ಬಡ್ಡಿ ಎಷ್ಟಾಗುತ್ತದೆ? ವರ್ಷಕ್ಕೆ ಎರಡು ಮೂರು ಸಾರಿ ಫ್ಲಕ್ಚುಯೇಷನ್ ಆಗುತ್ತದೆ. ಎಲೆಕ್ಟ್ರಿಸಿಟಿ ಫ್ಲಕ್ಚುಯೇಷನ್ ಬಂದು ಮೋಟಾರ್ ಸುಟ್ಟು ಹೋಗುತ್ತದೆ.

ಇವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಏನು ಅಣೆಕಟ್ಟುಗಳನ್ನು ಕಟ್ಟುತ್ತಿದ್ದೇವೆ, ಎಲ್ಲಿ ನೀರು ಕೊಡುತ್ತಿದ್ದೇವೆ, ಅಲ್ಲಿ ಎಕರೆಗೆ ಎಷ್ಟು ಹೋಗುತ್ತಿದೆ? 250, 300, 400 ರೂಪಾಯಿ ಇದೆ. ನಾವು ಏತಕ್ಕೆ ಅವರಿಗೆ ದುಡ್ಡು ಕೊಡಬೇಕು? ಬಯಲು ಪ್ರದೇಶಗಳಲ್ಲಿ ಆಲೂಗಡ್ಡೆ ಮೇಲೆ ತೆರಿಗೆ ಇಲ್ಲವೇ? ನಮ್ಮ ಜೋಳದ ಮೇಲೆ ತೆರಿಗೆ ಇಲ್ಲವೇ? ರಾಗಿ ಮೇಲೆ ತೆರಿಗೆ ಇಲ್ಲವೇ? ನಾವು ಏಕೆ ದುಡ್ಡು ಕೊಡಬೇಕು? ನಮಗೆ ಏನು ಗ್ರಹಚಾರ? ವಿಶ್ವ ಬ್ಯಾಂಕಿನಲ್ಲಿ ಸಾಲ ತರುತ್ತಿದ್ದವಲ್ಲಾ ಅವರೇನು ಪುಕ್ಷಟ್ಟೆ ಕೊಡುತ್ತಾರೆಯೇ? ವಿಶ್ವ ಬ್ಯಾಂಕಿನ ಕಂಡಿಷನ್ ಪ್ರಕಾರ 30 ಪರ್ಸೆಂಟ್ ಜಾಸ್ತಿಯಾಗುತ್ತದೆ. ಅವರಿಗೆ ನಾವು ಬಡ್ಡಿ ಕೊಡಬೇಕು? ಇದನ್ನೆಲ್ಲಾ ರಾಜ್ಯದ ಓಟ್ಟು ಆದಾಯದಲ್ಲಿ ಸೇರಿಸುತ್ತಿದ್ದೇವೆಯೇ ಹೊರತು ಬರೀ ನೀರಾವರಿಯಲ್ಲಿ ಸೇರಿಸುತ್ತಿಲ್ಲ. ಇವತ್ತು 180 ಕೋಟಿ ರೂಪಾಯಿಯಲ್ಲಿ 28,30 ಕೋಟಿ ರೂಪಾಯಿ ನೀರಾವರಿ ತೆರಿಗೆ ಬರಬೇಕು. ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ಎಷ್ಟು ವಸೂಲು ಮಾಡಿದರೂ ಕೂಡ ಮೇಂಟೆನೆನ್ಸ್ ಚಾರ್ಜಸ್ ಆಗುವುದಿಲ್ಲ. ಹಾಗಾದರೆ ಸಾಲ ಹೇಗೆ ತೀರಿಸುವುದು? ಎಲ್ಲಿ ನೀರಾವರಿ ಜಾಸ್ತಿ ಇದೆ, ಅಲ್ಲಿ ಇಂಜಿನಿಯರುಗಳು ತಿನ್ನುವುದು, ಏನೂ ಇಲ್ಲದಿರುವ ಕಡೆ ತಿನ್ನುವುದಿಲ್ಲ.

ಅಧ್ಯಕ್ಷರು : ಮಾಟಾಳರು, ನಂಜೇಗೌಡರು ಮತ್ತು ನಾವೆಲ್ಲಾ ಬೆಳಿಗ್ಗೆ ಒಂಭತ್ತೂವರೆಗೆ ಬಂದವರು. ಕಾಗೋಡು ತಿಮ್ಮಪ್ಪನವರು ಇನ್ನೂ ಮಾತನಾಡುವ ಮೂಡ್ ನಲ್ಲಿದ್ದಾರೆ. ಸ್ವಲ್ಪ ಬೇಗ ಮುಗಿಸೋಣ.

ಶ್ರೀ ಕಾಗೋಡು ತಿಮ್ಮಪ್ಪ : ಗಡಿಬಿಡಿ ಮಾಡಿದರೆ ಆಗುವುದಿಲ್ಲ. ನೀರಿನ ಬಳಕೆದಾರರ ಸಹಕಾರ ಸಂಘಗಳನ್ನು ಮಾಡಿ ಅವುಗಳಿಗೆ ನೀರನ್ನು ನಾವು ಕೊಟ್ಟು ನಾವು ಅವರಿಂದ ತೆರಿಗೆಯನ್ನು ವಸೂಲು ಮಾಡಬೇಕೆಂಬ ಉದ್ದೇಶಗಳನ್ನು ಇಲ್ಲಿ ಬರೆದಿದ್ದೀರಿ.

ಇವತ್ತು ಜಾಲಪ್ಪನವರು ಕಂದಾಯ ಸಚಿವರು ಹೌದು; ದೊಡ್ಡ ಸಹಕಾರಿಗಳೂ ಹೌದು, ಸಹಕಾರ ಕ್ಷೇತ್ರದಲ್ಲಿ ಬಹಳ ವರ್ಷಗಳಿಂದ ಅನುಭವ ಪಡೆದು ಕೊಂಡಿದ್ದಾರೆ. ನಾವಂತೂ ಆ ಕಡೆ ಕಾಲಿಡಲಿಲ್ಲ. ಸಹಕಾರ ಸಂಘಗಳಲ್ಲಿ ಏನಾಗಿದೆ ನಾನು ಅದಕ್ಕೆ ಕೈ ಹಾಕುವುದಕ್ಕೆ ಹೋಗುವುದಿಲ್ಲ. ನಿಮಗೇ ಬಿಟ್ಟು ಬಿಟ್ಟಿದ್ದೇನೆ. ಈ ಜವಾಬ್ದಾರಿಯನ್ನು ನಮ್ಮ ಸಹಕಾರ ಸಂಘಗಳು ನಿಜವಾಗಿ ನಿರ್ವಹಿಸುತ್ತವೆಯೇ? ಈ ಕಲ್ಪನೆಗಳನ್ನು ಅಥವಾ ಉದ್ದೇಶಗಳನ್ನು ಅವು ಕಾರ್ಯರೂಪಕ್ಕೆ ಬರುತ್ತವೆಯೇ? ಎಂಬ ಸಂದೇಹ ನನಗಿದೆ. ಏಕೆಂದರೆ ಸಹಕಾರ ಸಂಘಗಳು ಇವತ್ತಿನವರೆಗೆ ಬೆಳೆದು ಬಂದಿರತಕ್ಕದ್ದು, ಅವುಗಳು ನಡೆದುಕೊಳ್ಳತಕ್ಕದ್ದು, ಕೊಟ್ಟಂಥ ಸಾಲವನ್ನು ವಸೂಲು ಮಾಡುವುದಿಲ್ಲ. ಹೆಚ್ಚೂ ಕಡಿಮೆ ನಮ್ಮ ರಾಜ್ಯದಲ್ಲಿರತಕ್ಕ ಏಳು ಸಾವಿರ ಸಹಕಾರ ಸಂಘಗಳಲ್ಲಿ ವಯಬಲ್ ಸಹಕಾರ ಸಂಘಗಳು ಇರತಕ್ಕದ್ದು ಹೆಚ್ಚು ಕಡಿಮೆ ಎರಡರಿಂದ ಮೂವರು ಸಾವಿರಕ್ಕಿಂತ ಜಾಸ್ತಿ ಇಲ್ಲ. ನಾವು ಎಲ್ಲಾ ಪ್ರಯತ್ನ ಮಾಡಿದ್ದೇವೆ. ಇವತ್ತು ಎಷ್ಟು ಸಹಕಾರ ಸಂಘಗಳು ವಯಬಲ್ ಇವೆ ಹೇಳಿ. ಆದ್ದರಿಂದ ಈ ಸಹಕಾರ ಕ್ಷೇತ್ರದಲ್ಲಿ ನಾವು ಸಾಕಷ್ಟು ಲೋಪ ಮಾಡಿದ್ದೇವೆ. ಅವನ್ನು ಬೆಳೆಸತಕ್ಕ ಪ್ರಯತ್ನ ಮಾಡಲಿಲ್ಲ. ಅವು ನಮ್ಮ ನಿರೀಕ್ಷಣೆ ಪ್ರಮಾಣದಲ್ಲಿ ಬೆಳೆದಿಲ್ಲ.ಸಹಕಾರಿ ಆಂದೋಲನ ಪ್ರಾರಂಭವಾಗಿ ಒಂದು ಶತಮಾನವೇ ಆಗಿದೆ. ಇವತ್ತಿನವರೆಗೂ ಪ್ರಾಥಮಿಕ ಹಂತದಲ್ಲಿ ಸಹಕಾರ ಸಂಘಗಳು ಅತ್ಯಂತ ಪ್ರಬಲವಾಗಿ ಬೆಳೆದಿಲ್ಲ ಮತ್ತು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿಲ್ಲ. ಇದು ನಮ್ಮ ಕಣ್ಣಿಗೆ ಕಾಣುತ್ತಾ ಇರತಕ್ಕ ವಿಚಾರ. ಹೀಗಿದ್ದರೂ ಕೂಡ ಪುನಃ ಸಹಕಾರ ಸಂಘಗಳಿಗೆ ದೊಡ್ಡ ಜವಾಬ್ದಾರಿಯನ್ನು ನಾವು ಕೊಟ್ಟರೆ ನಿಜವಾಗಿಯೂ ಅವು ನಿರ್ವಹಿಸುತ್ತವೆಯೇ ಎಂಬ ಸಂಶಯ ಇವತ್ತು ನಮಗೆ ಕಾಣುತ್ತಿದೆ. ಮಾನ್ಯ ದೇವೇಗೌಡರೇ, ತಾವು ಮುಖ್ಯ ಮಂತ್ರಿಗಳಾಗಿದ್ದೀರಿ.

ನಾನು ತಮಗೆ ಹೇಳುತ್ತೇನೆ ನೀವು ಇವತ್ತು ಮನಸ್ಸು ಮಾಡಬೇಕು. ಕಷ್ಟ ಇದೆ. ಇದು ಅಷ್ಟೊಂದು ಸುಲಭವಾದ ಕೆಲಸವಲ್ಲ. ಜೇನುಗೂಡಿಗೆ ಕೈ ಹಾಕಿದ್ದೀರಿ. ಆದ್ದರಿಂದ ಇವತ್ತು ಈ ಕೆಲಸ ನಿರ್ವಹಿಸಬೇಕಾದರೆ ನೀವು ನೇರವಾಗಿ ನಮ್ಮ ಸರ್ಕಾರಿ ಯಂತ್ರವನ್ನೇ ಬಲಪಡಿಸಿ ನಿಜವಾಗಿಯೂ ನಮ್ಮ ಮಾನ್ಯ ರೈತ ಸಂಘದ ಸದಸ್ಯರು ಹೇಳಿದ ರೀತಿಯಲ್ಲಿ ಏನು ಲೋಪದೋಷಗಳಿವೆ ಅವುಗಳನ್ನು ಸರಿಪಡಿಸಿಕೊಂಡು ನಮ್ಮ ಸರ್ಕಾರಿ ಯಂತ್ರದಿಂದ ನೀರಾವರಿ ತೆರಿಗೆಯನ್ನು ಕಡ್ಡಾಯವಾಗಿ ಆಯಾ ವರ್ಷ ವಸೂಲು ಮಾಡತಕ್ಕ ಕ್ರಮವನ್ನು ಮಾಡಲೇಬೇಕು. ಮಾಡತಕ್ಕಂಥ' ಹೊಣೆಗಾರಿಕೆಯಲ್ಲಿ ನೀವೇನಾದರೂ ತಪ್ಪಿದರೆ ಮತ್ತೆ ಕರ್ನಾಟಕದ ಬೇರೆ ರೈತರ ಶಾಪಕ್ಕೆ ಗುರಿಯಾಗಲೇಬೇಕಾಗುತ್ತದೆ. ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ನನಗಂತೂ ಇವತ್ತಿಗೂ ಕೂಡ ನಂಬಿಕೆ ಬರುವುದಿಲ್ಲ. ನಿಮಗೆ ಎಷ್ಟು ಪ್ರಮಾಣದಲ್ಲಿ ಇದರ ಬಗ್ಗೆ ನಂಬಿಕೆ ಬಂದಿದೆಯೋ ನನಗೆ ಗೊತ್ತಿಲ್ಲ. ಅಂತೂ ನೀವು ಒಂದು ದೊಡ್ಡ ಪ್ರಯತ್ನ ಮಾಡುವುದಕ್ಕೆ ಏನು ಹೊರಟಿದ್ದೀರಿ, ಆದರೆ ಇನ್ನೊಂದು ಸಾರಿ ಆಲೋಚನೆ ಮಾಡಿ. ಏಕೆಂದರೆ ಇದನ್ನು ಸ್ವಲ್ಪ ಆಲೋಚನೆ ಮಾಡೋಣ. ನಮ್ಮ ಊರು, ನಮ್ಮ ಸಮಾಜ, ನಮ್ಮ ರೈತರು ನಮ್ಮ ನಿರೀಕ್ಷಣೆಯ ಪ್ರಮಾಣದಲ್ಲಿ ಬೆಳವಣಿಗೆ ಆಗಿಲ್ಲ. ಇವತ್ತು ನಮ್ಮ ಊರಿನಲ್ಲಿ ನಮ್ಮ ಗ್ರಾಮದಲ್ಲಿ ಇರತಕ್ಕಂಥ ಸಹಕಾರ ಸಂಘವನ್ನೇ ನಡೆಸಿಕೊಂಡು ಹೋಗುವುದಕ್ಕೆ ಆಗದೇ ಇರತಕ್ಕ ಜನ ನಾಳೆ ಕರಾರುವಕ್ಕಾಗಿ ನಮ್ಮ ಸ್ಲೂಯೀಸನ್ನು ಮೈಂಟೇನ್ ಮಾಡತಕ್ಕದ್ದು, ನಮ್ಮ ಕಾಲುವೆಗಳನ್ನು ಮೈಂಟೇನ್ ಮಾಡತಕ್ಕದ್ದು, ಅವರಿಗೆ ಕರಾರುವಕ್ಕಾಗಿ ನೀರನ್ನು ಬಿಡತಕ್ಕದ್ದು, ನೀರನ್ನು ಮುಚ್ಚತಕ್ಕದ್ದು ಅದಕ್ಕೆ ಕರ ಹಾಕತಕ್ಕದ್ದು, ವಸೂಲಿ ಮಾಡತಕ್ಕದ್ದು ಮಾಡಿಯಾರೆ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರೂ ನಮ್ಮ ನಮಗೆ ಹಾಕಿಕೊಳ್ಳಬೇಕು. ನಾನಂತೂ ನಮ್ಮ ಊರಿನಲ್ಲಿ ಇದು ಆಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮೊದಮೊದಲು ಸ್ವಲ್ಪ ತೊಂದರೆಯಾಗುತ್ತದೆ. ಒಂದು ವರ್ಷ ಎರಡು ವರ್ಷ ಈ ಕಷ್ಟ ಇದ್ದೇ ಇರುತ್ತದೆ. ಹಾಗೇನೇ ಇಂಗ್ಲೀಷಿನವರೂ ಹೇಳುತ್ತಿದ್ದರು ಇವರಿಗೆ ಸ್ವಾತಂತ್ರ್ಯ ಕೊಟ್ಟರೆ ಉಳಿಸಿಕೊಳ್ಳುತ್ತಾರೋ ಇಲ್ಲವೋ ಎಂದು. ಇವತ್ತು ಮಹಾರಾಷ್ಟ್ರ ರೈತರು ಮಾಡುತ್ತಾ ಇದ್ದಾರಲ್ಲಾ ನಾವು ಏತಕ್ಕಕೆ ಮಾಡುವುದಕ್ಕಾಗುವುದಿಲ್ಲ? ನಾನು ಒಪ್ಪುತ್ತೇನೆ. ನಾಲ್ಕು ವರ್ಷ ತೊಂದರೆಯಾಗಬಹುದು.

ನೀವು ದುಡ್ಡು ಕೊಡದಿದ್ದರೆ ನೀರು ಕೊಡುವುದಿಲ್ಲ ಎಂದು ನಿಲ್ಲಿಸಿದಾಗ ಜಗಳ ಆಗುತ್ತದೆ. ಆಗಲಿ ನೋಡೋಣ ಅನ್ನಬೇಕು ನಾವು. ಕಾಯೋಣ. ಮೂರು ವರ್ಷ ಎಕ್ಸ್‌ಪರಿಮೆಂಟ್ ಮಾಡೋಣ, ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ಹೊಸ ಒಂದು ವ್ಯವಸ್ಥೆ ತರುವುದಕ್ಕೆ ಹೊರಟಿದ್ದೀರಿ. ಬೇಕಾದರೆ ಸದನದ ಸಮಿತಿಯನ್ನು ಮಾಡಿ. ಇದನ್ನು ಆಲೋಚನೆ ಮಾಡಿ ಮಾಡುವುದಾದರೆ ನನ್ನದೇನಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ದಯವಿಟ್ಟು ರೆಫರ್ ಮಾಡಿ. ಇದು ಆಗುಹೋಗುಗಳನ್ನು ಅಲ್ಲಿ ಚರ್ಚೆ ಮಾಡಲು ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಹಾಗೆ ಮಾಡಿದರೆ ಬಹಳ ಒಳ್ಳೆಯದು. ಸಹಕಾರ ಸಂಘಗಳ ಬಗ್ಗೆ ಬಹಳ ದೊಡ್ಡ ಅಭಿಮಾನ ಈಗ ಇಟ್ಟುಕೊಂಡಿದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ; ರೈತರು ಟ್ಯಾಕ್ಸ್ ಎಷ್ಟು ಕೊಡುತ್ತೇವೆ? 1 ಎಕರೆ ಕಬ್ಬು ಬೆಳೆದರೆ 6 ಸಾವಿರ ರೂಪಾಯಿ ಟ್ಯಾಕ್ಸ್ ಕೊಡುತ್ತೇವೆ. 8 ಸಾವರಿ ಸಬ್ಸಿಡಿ ಕೊಡುತ್ತೇವೆ. 40 ಕೆ.ಜಿ. ಕಾಫಿ .....

ಶ್ರೀ ಆರ್. ಎಲ್. ಜಾಲಪ್ಪ : ಈ ವಿತ್ತಂಡ ವಾದ ನನಗೆ ಗೊತ್ತಿಲ್ಲವೇ? ಸುಮ್ಮನೆ ದುಡ್ಡು ಕೊಡುವುದು ನೋಡಿ.

ಶ್ರೀ ಎಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ತುಂಬಾ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಇರತಕ್ಕ ಲೋಪದೋಷಗಳು ಏನಿವೆ ಎಂಬುದನ್ನು ಎತ್ತಿತೋರಿಸಿದ್ದೀರಿ. ನಾನು ಗೆಳೆಯರಾದ ಶ್ರೀಮಾನ್ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ನಮ್ಮ ದೇಶದ ರೈತರು ಇಸ್ರೇಲ್ ದೇಶದ ರೈತರಿಗೆ ಹೋಲಿಸಿಕೊಳ್ಳುವ ಶಕ್ತಿ ಇಲ್ಲ ಎನ್ನುವುದನ್ನು ಹೇಳಿದಿರಿ. ನಾನು ಕಮ್ಯುನಿಸ್ಟ್ ಕಂಟ್ರೀಸ್‌ಗೆ ಹೋಗಿಲ್ಲ. ನಮ್ಮ ಉಪಮುಖ್ಯ ಮಂತ್ರಿಗಳು ಹೋಗಿ ಬಂದಿದ್ದಾರೆ. ಪ್ರಪಂಚದ ಯಾವುದೇ ಭಾಗಕ್ಕೆ ಹೋದರೂ ನೀರನ್ನು ಮೆಷರ್ ಮಾಡದೇ ಯಾವ ರೈತರಿಗೂ ಕೊಡುವುದಿಲ್ಲ. ಆಸ್ಟ್ರೇಲಿಯಾ ಆಗಲಿ, ಎಲ್ಲಿಗೇ ಹೋಗಿ ನೀವು. ನೀರನ್ನು ಮೆಷರ್ ಮಾಡದೇ ರೈತನಿಗೆ ಕೊಡುವುದಿಲ್ಲ. ಇಲ್ಲೂ ಇತ್ತು. ನಾನು ಈ ಸದನಕ್ಕೆ ಬಂದಾಗ ನಮ್ಮ ಊರಿನಲ್ಲಿ ಕೆರೆ ಮಾಡಿಕೊಡಿ, ನಾವು ಬೆಟರ್ ಮೆಂಟ್ ಟ್ಯಾಕ್ಸ್ ಕೊಡುತ್ತೇವೆ, ವಾಟರ್ ರೇಟೂ ಕೊಡುತ್ತೇವೆ. ಹತ್ತು ರೂಪಾಯಿ ಛಾಪಾ ಕಾಗದದಲ್ಲಿ ಬರೆದೂ ಅವರೇ ಕೊಡುವುದು. ವಾಟರ್ ರೇಟ್ ಜೊತೆಗೆ ಬೆಟರ್ ಮೆಂಟ್ ಟ್ಯಾಕ್ಸ್‌ನ್ನೂ ಕೊಡುತ್ತೇವೆ ಎಂದು ಬರೆದುಕೊಡುತ್ತಿದ್ದರು. ಅದನ್ನು ತಪ್ಪಿಸಿದವರು ನಾವೇ.

ನೀವು ಸತ್ಯವಾದ ಮಾತು ಹೇಳಿದಿರಿ, ಓಟಿಗೋಸ್ಕರ ನಾವೇ ತಪ್ಪಿಸಿದೆವು. ಯಾವ ರೈತರೂ ಬೇಡ ಅನ್ನಲಿಲ್ಲ. ನೀರಾವರಿ ರೈತ ನಮಗೆ ಪ್ರಾಜೆಕ್ಟ್ ಮಾಡಿಕೊಡಿ, ನೀವು ಏನು ಹೇಳಿದರೂ ಕೊಡುತ್ತೇವೆ ಎಂದು ಪ್ರತಿಯೊಬ್ಬ ನಿಜವಾದ ರೈತ ಹೇಳುತ್ತಿದ್ದ. ನೀವು ಸತ್ಯವಾದ ಮಾತು ಹೇಳಿದಿರಿ, ಓಟಿಗೋಸ್ಕರ ನಾವೇ ತಪ್ಪಿಸಿದೆವು. ಯಾವ ರೈತರೂ ಬೇಡ ಅನ್ನಲಿಲ್ಲ. ನೀರಾವರಿ ರೈತ ನಮಗೆ ಪ್ರಾಜೆಕ್ಟ್ ಮಾಡಿಕೊಡಿ, ನೀವು ಏನು ಹೇಳಿದರೂ ಕೊಡುತ್ತೇವೆ ಎಂದು ಪ್ರತಿಯೊಬ್ಬ ನಿಜವಾದ ರೈತ ಹೇಳುತ್ತಿದ್ದ. ಓಟಿಗೋಸ್ಕರ ರಾಜಕೀಯ ಪ್ರಾರಂಭ ಆಯಿತು. ಅದಕ್ಕೋಸ್ಕರ ನಾನು ಇವತ್ತು ಅದನ್ನೆಲ್ಲಾ ಎಲಾಬರೇಟ್ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಹೇಳಿದ ದೋಷ ಎಲ್ಲಿದೆ? ವಿಲೇಜ್ ಅಕೌಂಟೆಂಟ್ ಸರಿಯಾಗಿ ಪಹಣಿ ಬರೆಯುವುದಿಲ್ಲ. ನಿಜ. ಇಲಾಖಾ ಅಧಿಕಾರಿಗಳು water made available ಅದು ಹೋಯಿತೋ ಬಿಡಿತೋ. ಅದೂ ನಿಜ. ಅವರು ಹೇಳಿದರು ಆ ಕೆನಾಲ್ ಸಿಸ್ಟಂನಲ್ಲಿ ಇಷ್ಟು ನೀರು ಹೋಗುತ್ತದೋ ಇಲ್ಲವೋ. It is the responsibility of the Engineers to supply that much quantum of water. ಅದೂ ನಿಜ. ಏಕಾಗಿದೆ? ಕೆನಾಲ್ ಸಿ ಡಿಸೈನ್ ಮಾಡಿರುವುದು ನಾವು Dry cum wetಗೆ ಮಾಡಿದ್ದೇವೆ. ಅಲ್ಲಿ ನೀವು ವೆಟ್ ಮಾಡಬೇಕು, ಕಬ್ಬಿಗೆ ನೀರು ತೆಗೆದುಕೊಂಡು ಹೋಗಬೇಕು, ಭತ್ತಕ್ಕೆ ನೀರು ತೆಗೆದುಕೊಂಡು ಹೋಗಬೇಕು ಎಂದು ಹೇಳಿದರೆ ಹೇಗೆ ಆಗುತ್ತದೆ because canal itself designed for particular specific crop. ಅವನೇನು ಮಾಡುತ್ತಾನೆ? ಇಂಜಿನಿಯರ್ ಏನು ಮಾಡುತ್ತಾನೆ? ಕೆ.ಆರ್.ಎಸ್. ನಲ್ಲಿ ಕಬ್ಬು ಇಷ್ಟು ಎಂದು ಹೇಳಿದ್ದೇವೆ. ಭತ್ತ ಇಷ್ಟು ಎಂದು ಹೇಳಿದ್ದೇವೆ. ಡ್ರೈ ಕಮ್ ವೆಟ್ ಇಷ್ಟು ಎಂದು ಹೇಳಿದ್ದೇವೆ. ನೀವು ಅದನ್ನು ಎರಡೂವರೆ ಲಕ್ಷಕ್ಕೋ ಮೂರು ಲಕ್ಷಕ್ಕೋ ತೆಗೆದುಕೊಂಡು ಹೋದರೆ ಇಂಜಿನಿಯರ್ ಏನು ಹಗಲು ರಾತ್ರಿ ಶಂಖ ಹೊಡೆದುಕೊಳ್ಳುತ್ತಾನೋ? ಈಗ ಹೇಮಾವತಿ ಹಿಂಭಾಗದಲ್ಲಿ ನಾವು ಡ್ರೈ ಕಮ್ ವೆಟ್ ಎಂದು ಮಾಡಿದ್ದೇವೆ. ಈಗ ಎಲ್ಲಾ ಭತ್ತ ಬೆಳೆಯುತ್ತಿದ್ದಾರೆ. ಆ ಪ್ರಶ್ನೆಯೇ ಇಲ್ಲ. ಕೆನಾಲ್ ಡಿಸೈನ್ ಮಾಡಿರುವುದು Dry cum wetಗೆ ಮಾಡಿದ್ದೇವೆ. How can you force that water? ಇವತ್ತು ಇದರಲ್ಲಿ ಏನು ಬರುತ್ತದೆಂದರೆ ಪರ್ಟಿಕ್ಯುಲರ್ ಏರಿಯಾ, ಉದಾಹರಣೆಗೆ ನಿಮ್ಮ ಮುಂದೆ ಇಡುತ್ತೇನೆ ನಾನು. ಒಂದು ಡಿಸ್ಟ್ರಿಬ್ಯೂಟರಿ ಇದೆ. ಪರ್ಟಿಕ್ಯುಲರ್ ಡಿಸ್ಟ್ರಿಬ್ಯೂಟರಿಗೆ

ಒಂದು ಔಟ್ ಲೆಟ್ ಇದೆ ಅಲ್ಲಿ. ಅಲ್ಲಿ ನಾನು ಮೀಟರ್ ಫಿಕ್ಸ್ ಮಾಡುತ್ತೇನೆ. 1000 ಎಕರೆ ಆ ಡಿಸ್ಟ್ರಿಬ್ಯೂಟರಿಗೆ ಬರುತ್ತದೆ. ನಾನು ಕೊಡತಕ್ಕ ಕ್ರಾಫ್ ಇದು. ಡ್ರೈ ಕಮ್ ವೆಟ್. ಅಲ್ಲೇ ನಾವು ಮೀಟರ್ ಇಡುತ್ತೇವೆ. ನೀನು ತೊಗೋಪ್ಪ ಎಂದು ಹೇಳುತ್ತೇವೆ. ಯಾವ ಪಹಣಿ ಸುಳ್ಳು ಬರೆಯುತ್ತಾನೆ ಅನ್ನುವುದೂ ಬೇಡ. ನೀರು ಕೊಡಲಿಲ್ಲ ಎಂದು ಹೇಳುವುದೂ ಬೇಡ. ಈ ಸೊಸೈಟಿಗೆ ಬಲ್ಕ್ ಸಪ್ಲೈ ಕೊಡುತ್ತೇನೆ ನಾನು, ನೀವು ತೆಗೆದುಕೊಳ್ಳಪ್ಪ, ಡ್ರೈ ಕಮ್ ವೆಟ್‌ಗೆ ಎಷ್ಟು ಬೇಕೋ ಅಷ್ಟು ತೆಗೆದುಕೊ ನೀನು ಎಂದು ಹೇಳೋಣ. ವಂಚನೆ ಇಲ್ಲ ಅಲ್ಲಿ, ಮೋಸ ಇಲ್ಲ. ಮೀಟರ್ ಇಡೋಣ. ಏತಕ್ಕೆ ಆಗುವುದಿಲ್ಲ? ಎಂದರೆ ಅದರ ಅರ್ಥ ಏನು ಎಂದರೆ ಮತ್ತೆ ಅಲ್ಲೇ ಬರುತ್ತದೆ ರಾಜಕೀಯ. ಅದನ್ನು ಇನ್ನೊಬ್ಬರು ನೀವು ಯಾರೋ ಬೆಂಬಲ ಮಾಡಿದಿರಿ. ನಾನು ಈ ಕಡೆ ಕುಳಿತಿದ್ದೇನೆ. ನೀವು ಆ ಕಡೆ ಕುಳಿತಿದ್ದೀರಿ. ನಾಳೆ ಇಲ್ಲೇ ನೀವು ಬಂದು ಕುಳಿತುಕೊಳ್ಳಬಹುದು.

ಇಡೀ ಸದನ ಒಂದು ವಾಯ್ಸ್‌ನಿಂದ ಮುಂದೆ ಹೋಗುವುದಾದರೆ ಸಾಧ್ಯವಾಗುವುದಿಲ್ಲವೇನು? ಬಲ್ಕ್ ಸಪ್ಲೈ ತೆಗೆದುಕೊಳ್ಳಿ, ಹಂಚಿಕೊಳ್ಳಿ ನೀವು. ನಮ್ಮ ವಿಲೇಜ್ ಅಕೌಂಟೆಂಟ್ ಲಂಚ ಹೊಡೆಯುತ್ತಾನೋ ಇಂಜಿನಿಯರ್ ಲಂಚ ಹೊಡೆಯುತ್ತಾನೋ ಪ್ರಶ್ನೆ ಬೇಕಾಗಿಲ್ಲ. ಮೀಟರ್ ಇಡುತ್ತೇನೆ, ನೀನು ಅಳತೆ ಮಾಡಿಕೊಂಡು ನೀರು ತೆಗೆದುಕೋ. ಆ ಕೆನಾಲ್ ಸಿಸ್ಟಂ ಕೆಟ್ಟುಹೋಗಿದೆಯೋ ಕಾಲುವೆ ತೆಗೆದಿದೆಯೋ, ಅಲ್ಲೇ ನಾನು ಅಳತೆ ಮಾಡಿ ಕೊಡುತ್ತೇನೆ ನೀರನ್ನು ಏತಕ್ಕಾಗುವುದಿಲ್ಲ್? ಆಗುವುದಿಲ್ಲ ಎಂದು ಹೇಳಿದರೆ ಒಂದು ಸ್ಟೇಜ್ ನಲ್ಲಿ ಸಂಘರ್ಷ ಆಗಬಹುದು. ಸಂಘರ್ಷ ಯಾವುದಕ್ಕಾಗಿಲ್ಲ? ದೇವರಾಜ ಅರಸ್ ಅವರು ಸಮಗ್ರ ಭೂ ಕಾಯಿದೆ ತಂದಾಗ ಸಂಘರ್ಷ ಆಗಲಿಲ್ಲವೇ? ಬಸವಲಿಂಗಪ್ಪನವರು 15 ವರ್ಷದೊಳಗಡೆ ಮಂಜೂರಾಗಿರುವ ಜಮೀನನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಕಾನೂನು ತಂದರಲ್ಲಾ ವಯಲೇಷನ್ ಆಫ್ ಲ್ಯಾಂಡ್ ಗ್ರಾಂಟ್ ರೂಲ್ಸ್ ಸ್ಪಿಪ್ಯುಲೇಟೆಡ್ ಟೈಮ್‌ಗಿಂತ ಮುಂಚೆ ಮಾರಿದ್ದನ್ನು ವಾಪಸ್ ಕಿತ್ತುಕೊಳ್ಳಬೇಕು ಎಂದು ಕಾನೂನು ತಂದರಲ್ಲಾ ಆಗ ಸಂಘರ್ಷ ಆಗಲಿಲ್ಲವೇ? ಯಾವಾಗ ಸಂಘರ್ಷ ಆಗಿಲ್ಲ. ಇಂತಹ ಪ್ರಗತಿಪರವಾದ ಕಾನೂನು ತರುವುದಕ್ಕೆ ಹೋದಾಗ ಸಂಘರ್ಷ ಆಗುತ್ತದೆ. ಹೌದು. ನೀವು ಒಂದು ಮಾತು ಹೇಳಿದಿರಿ. ನೋಡಿ ದೇವೇಗೌಡರೇ, ತುಂಬಾ ಎಚ್ಚರಿಕೆಯಿಂದ ಇರಿ, ನಿಮ್ಮ ಪಕ್ಕದಲ್ಲಿ ಪಟೇಲರು ಕುಳಿತಿದ್ದಾರೆ ಎಂದಿರಿ. ಅದರ ಅರ್ಥ ಏನೆಂದರೆ ನಿಮ್ಮಿಬ್ಬರಿಗೇ ತಲೆಗೆ ಕಟ್ಟುತ್ತಾರೆ ಜನ ಎಂದು. ಕಟ್ಟಲಿ. ನಾವು ಅವರಿಗೆ ಮೋಸ ಮಾಡಿದರೆ ಆ ಶಾಪಕ್ಕೆ ಗುರಿಯಾಗೋಣ. ತಾವು ಒಂದು ಶಬ್ದ ಹೇಳಿದಿರಿ, ಮೈಂಟೇನೆನ್ಸ್ ಕೂಡ ಆಗುವುದಿಲ್ಲ ಎಂದು ಹೇಳಿದಿರಿ. ನಾವು ಏನು ಬಂಡವಾಳ ಹೂಡುತ್ತಿದ್ದೇವೋ ಬಡ್ಡಿ ಕೊಡುತ್ತಿದ್ದೇವೋ ಅದು ಮೈಂಟೇನೆನ್ಸ್ ಕೂಡ ಆಗುವುದಿಲ್ಲ ಎಂದು ನೀವು ಏನು ಹೇಳಿದಿರಿ. ಅದು ಸತ್ಯಾಂಶ ಇದ್ದಾಗ ಹೇಳೋಣ ರೈತರಿಗೆ. ಹೀಗಲ್ಲಪ್ಪ ಹೀಗೆ ಇದೆ ಅಂತ. ಇದರಲ್ಲಿ ಏನಾದರೂ ದುರುಪಯೋಗ ಮಾಡುವುದಾದರೆ ನಮ್ಮನ್ನು ಗಲ್ಲಿಗೇರಿಸಲಿ ಅವರು. ಆದರೆ ಒಂದೇ ನಮ್ಮ ಮುಂದಿರತಕ್ಕದ್ದು. ಈ ಸೊಸೈಟಿ ಮಾಡುವ ಉದ್ದೇಶ ಒಂದೊಂದು ಕಾಂಪ್ಯಾಕ್ಟ್ ಏರಿಯಾ ನಾವು ಮಾಡಿ ಆ ಏರಿಯಾಕ್ಕೆ ಎಲ್ಲಿ ಔಟ್‌ಲೆಟ್ ಇಡುತ್ತೇವೋ ಆ ಪಾಯಿಂಟ್ ಗೆ ನಾವು ಮೀಟರ್ ಇಡುತ್ತೇವೆ. ಮೆಷರ್ ಮಾಡುತ್ತೇವೆ. ತೆಗೆದುಕೊಳ್ಳುವುದಿಲ್ಲ ಅಂದರೆ ಬಿಟ್ಟು ಬಿಡಲಿ. ಎಲ್ಲಾ ಕಡೆ ಡ್ರಿಪ್ ಇರಿಗೇಷನ್ ಇಲ್ಲ. ಈ ಪ್ರಪಂಚದಲ್ಲಿ. ಅಲ್ಲಿ ಇಸ್ರೇಲ್‌ನಲ್ಲಿ ಮಾಡಿರುವುದಕ್ಕೆ ಬೇರೆ ಕಾರಣ ಇದೆ. ಕೆಲವು ಭಾಗದಲ್ಲಿ ಅರ್ಧ ಇಂಚು ಮಳೆಯಾಗುವುದಿಲ್ಲ. 2 ವರ್ಷಕ್ಕೆ ಸದರನ್ ಭಾಗದಲ್ಲಿ ನಾರ್ದನ್ ಭಾಗದಲ್ಲಿ ಮಳೆಯಾಗುತ್ತದೆ. ಅಲ್ಲಿ ಸ್ಟೋರ್ ಮಾಡಿಕೊಂಡು ಸುಮಾರು 850 ಕಿ.ಮೀ. ಕೆಳಗಡೆ ಪೈಪಲ್ಲಿ ನೀರನ್ನು ತೆಗೆದುಕೊಂಡು ಬಂದಿದ್ದಾರೆ. ಅದಕ್ಕೆ ನಾನು ಹೇಳಿದೆ.

ಕಳುಹಿಸಿಕೊಡುತ್ತೇನೆ. ಹೋಗಿ ನೋಡಿಕೊಂಡು ಬನ್ನಿ ಎಂದು. ಈ ಗುಂಪು, ಆ ಗುಂಪು ಎನ್ನುವುದು ಬೇಡ. ಇಲ್ಲಿಂದ 10 ಜನ ರೋಗಿ ನೋಡಿಕೊಂಡು ಬನ್ನಿ. ಎಜ್ಯುಕೇಟ್ ಆಗುತ್ತದೆ. ನಮ್ಮ ಅಪ್ರೋಚ್, ನಮ್ಮ ಥಿಂಕಿಂಗ್, ಇವೆಲ್ಲಾ ಬದಲಾವಣೆಯಾಗುತ್ತದೆ. ನನ್ನ ಉದ್ದೇಶ ಇಷ್ಟೇ. ಇದನ್ನು ಬಹಳ ದಿವಸ ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇಲ್ಲ, ಯಾವುದೇ ಸನ್ನಿವೇಶದಲ್ಲಿ, ಇದನ್ನು ಎದುರಿಸಬೇಕು ಅಂದರೆ ಎದುರಿಸಬೇಕಾಗುತ್ತದೆ. ಅನೇಕ ಸುಳ್ಳು ರಿಕಾರ್ಡ್‌ಗಳು, ಅಲ್ಲ ಸತ್ಯಾಂಶಕ್ಕೆ ದೂರವಾದುದು ಎಂದು ಹೇಳೋಣ. ಸುಳ್ಳು ಅನ್ನುವ ಶಬ್ದ ಅನ್ ಪಾರ್ಲಿಮೆಂಟರಿ.

ಶ್ರೀ ಹೆಚ್.ಎನ್. ನಂಜೇಗೌಡ : ಅದು ಹೋಯಿತು. ಉಪಯೋಗಿಸಬಹುದು.

ಶ್ರೀ ಹೆಚ್.ಡಿ. ದೇವೇಗೌಡ : ಅದು ಹೋಯಿತೇ? ಅದು ನನಗೆ ಗೊತ್ತಿಲ್ಲ, ನಮ್ಮ ಅಧಿಕಾರಿಗಳು ಬರೆದರು. ಆ ಜಗಳದಲ್ಲೇ ಇವತ್ತು 180-185 ಕೋಟಿ ರೂಪಾಯಿ—ವಸೂಲಿಯಾಗುವುದಕ್ಕಾಗಿಲ್ಲ, ಪೆಂಡೆನ್ಸಿ ಇದೆ. ಅಂದರೆ ವಾಟರ್—ರೇಟ್‌ಗೆ ಸಂಬಂಧಪಟ್ಟಂತೆ ಪೆನಾಲ್ಟಿಯನ್ನು ನಾವು ಹಾಕಿರುವುದು. I am seriously thinking of fixing a deadline, a cut-off date.

ನಮ್ಮ ರೈತರನ್ನೆಲ್ಲಾ ಕರೆಯಿಸಿ ಒಂದು ಡೆಡ್ ಲೈನ್ ಫಿಕ್ಸ್ ಮಾಡೋಣ. ಕಟಾಫ್ ದೇಟ್ ಅಂತ ಈ ವರ್ಷದಲ್ಲಿ ನಾವು ನಿಮ್ಮ ಹೊಲಕ್ಕೆ ನೀರನ್ನು ಇಷ್ಟನ್ನು ಕೊಡುತ್ತೇವೆ. ಅದು ನಮ್ಮ ಜವಾಬ್ದಾರಿ. ನಾವು ಮೀಟರ್ ಗಳನ್ನು ಫಿಕ್ಸ್ ಮಾಡುತ್ತೇವೆ. ನಿಮ್ಮ ಪೆನಾಲ್ಟಿ ಇರುವುದನ್ನು ಕೈಬಿಡಬೇಕೋ ಏನೋ, ಎಷ್ಟು ದಿವಸ ಲೆಕ್ಕಕ್ಕೆ ತೋರಿಸಿಕೊಂಡು ಇಟ್ಟುಕೊಳ್ಳಬೇಕು ನಾನು? ನೀವು ವಸೂಲು ಮಾಡುವ ಹಾಗೆ ಇಲ್ಲ, ಬಿಡುವ ಹಾಗೆ ಇಲ್ಲ, I go a step further sir,

ಸುಮ್ಮನೆ ಪುಸ್ತಕದಲ್ಲಿಟ್ಟುಕೊಂಡು ಏನು ಮಾಡುವುದು? ಅದು ಆಗಲಿಲ್ಲ, ಹೋಗಲಿಲ್ಲ. ಆದರೆ ಇವತ್ತು ಬಹಳ ರೈತರೆಲ್ಲಾ ಕೊಡುವುದೇ ಇಲ್ಲ, ಖರ್ಗೆಯವರು ಹೇಳಿದರು, 10 ಕೋಟಿಯನ್ನು ಕೊಡಬೇಕಾದುದಿಲ್ಲ ಎಂದು. TOday I am going to tell. ಎಕ್ಸ್‌ಟೆಂಡ್ ಮಾಡಿದೆ ಮೊನ್ನೆ. ಒಂದು 10-12 ದಿವಸವಾಯಿತು. ರೈತರಿಗೆ ಕೊಡುವ ಕೆಲವು ಬೆನಿಫಿಟ್ ಏನು ಇದೆ, ಅಂದರೆ ಇಂಟ್ರೆಸ್ಟನ್ನು ನಾವು ಮಾಫಿ ಮಾಡುತ್ತೇವೆಂದು ಏನು ಹೇಳಿದ್ದೇವೆ. I am happy to say today. 70% of the total loan has been recovered in Karnataka.

ಮೇ 31ರವರೆಗೆ ಎಂದು ಹೇಳಿದ್ದೇವೆ. 63 ಕೋಟಿ ಸಬ್ಸಿಡಿ ರೀಂಬರ್ಸ್‌ಮೆಂಟ್ ಮಾಡಬೇಕು, ಅಪೆಕ್ಸ್ ಬ್ಯಾಂಕಿಗೆ 86 ಕೋಟಿ ಲೇಟೆಸ್ಟ್ ಇನ್ನೂ ಒಂದು ತಿಂಗಳು ಇದೆ. 100 ಪರ್ಸೆಂಟ್ ರಿಕವರಿ ಆದರೂ ಅದರಲ್ಲೇನೂ ಆಶ್ಚರ್ಯಪಡಬೇಕಾಗಿಲ್ಲ, 130 ಕೋಟಿ ಎಂದು ಹೇಳಿದ್ದೇವೆ. ಸನ್ಯಾಸಿ ಪುಟ್ಟಣ್ಣನವರು ಹೇಳಿದರು. ನಾವೆಲ್ಲಾ ರೈತರ ಮಕ್ಕಳೇ. ಅವರು ಒಂದು ಮಾತನ್ನು ಹೇಳಿದರು, ರೈತರ ಬೆಳೆಗೆ ಬೆಲೆ ಸಿಕ್ಕುವುದಿಲ್ಲ ಎಂದು. ಎಕ್ಸ್‌ಪೋರ್ಟ್ ಮಾಡುವಂತಹದ್ದಕ್ಕೆ ಬೆಂಗಳೂರಿನಲ್ಲಿ Warehouse with all necessarty cold storage facilities ಮಾಡಬೇಕು ಎನ್ನುವುದು ನಮ್ಮ ಉದ್ದೇಶ. ಇದೇ ವರ್ಷ ಮಾಡಬೇಕೆಂಬುದು ನನ್ನ ಆಸೆ ಇದೆ. ಅದಕ್ಕೆ ಎಷ್ಟು ಪ್ರೈವೇಟ್ ಕ್ಯಾಪಿಟಲ್ ಇರಬಹುದು, ಏನೇ ಟೀಕೆ ಬರಲಿ, ಅದರ ಬಗ್ಗೆ ಯೋಚನೆ ಇಲ್ಲ. ನಾನು ಮಾಡುತ್ತೇನೆ. ಅದೂ ಏರ್‌ಪೋರ್ಟ್ ಹಿಂಭಾಗದಲ್ಲಿ, ಸದ್ಯಕ್ಕೆ 50- 60 ಎಕರೆ ಭೂಮಿಯನ್ನು ಇದಕ್ಕಾಗಿ ಕಾದಿರಿಸಿದ್ದೇವೆ. ಅವರು ಟೊಮ್ಯಾಟೋ ಬೆಳೆಯಲಿ, ಮತ್ತೊಂದು ಬೆಳೆಯಲಿ ಏನೇ ಬೆಳೆಯಲಿ ಅವರು ಅದನ್ನು ಇಟ್ಟುಕೊಂಡು ಮಾರಾಟ ಮಾಡಲಿ. ಹೌದು ನೀವು ಹೇಳುವುದು ಸತ್ಯ ಇದೆ ಇಲ್ಲ ಎಂದು ಹೇಳುವುದಿಲ್ಲ,

ಪ್ರಪಂಚದ ಮಾರುಕಟ್ಟೆ ಬೇಕಾದಷ್ಟು ಕಡೆ ಇದೆ. ದುರಾದೃಷ್ಟ ನಮ್ಮ ಹಣೆ ಬರಹ ಹಿಂದೆ ನಮ್ಮ ಕಾಲದಲ್ಲಲಿತ್ತು. ಇದರ ಬಗ್ಗೆ ಲಂಭಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ದೇವಿಲಾಲ್ ರವರು ಹೇಳಿದರು. ರೈತರ ಮಕ್ಕಳೇ ಅಂಬಾಸಿಡರ್ ಗಳು ಆಗಬೇಕು ಎಂದು ಅದರ ಬಗ್ಗೆ ತಮಾಷೆ ಮಾಡಿದರು. ಕೆಲವರು ಗೇಲಿ ಮಾಡಿದರು. ಅಂಬಾಸಿಡರ್ ಆಗುವುದು ನಮ್ಮಂತಹವರು ಮುಖ್ಯ ಮಂತ್ರಿಗಳೋ ಕೇಂದ್ರದ ಮಂತ್ರಿಗಳು ಹೋದಾಗ ನಮಗೆ ಸರಬರಾಜು ಮಾಡುವುದಕ್ಕೆ ಆಗಲಿಲ್ಲ. ಈ ರಾಷ್ಟ್ರದ ರೈತ ಏನು ಬೆಳೆಯುತ್ತಾನೆ, ಅಲ್ಲಿ ಏನು ಮಾರುಕಟ್ಟೆ ಇದೆ ಅನ್ನುವುದನ್ನು, ಯಾವ ದೇಶದಲ್ಲಿ ಏನು ಮಾರುಕಟ್ಟೆ ಇದೆ ಎನ್ನುವುದನ್ನು ಅರ್ಥ ಮಾಡಿ ಅವನು ಹೇಳಬೇಕಾಗುತ್ತದೆ. ನಮ್ಮ ವಾಣಿಜ್ಯ ಮಂತ್ರಿಗೆ. ಇಂತಹದ್ದಕ್ಕೆ ಇಲ್ಲಿ ಮಾರುಕಟ್ಟೆ ಇದೆ, ಇದನ್ನು ನೀವು ರಫ್ತು ಮಾಡತಕ್ಕಂತಹದ್ದರ ಬಗ್ಗೆ ನೀವು ಪ್ರಯತ್ನ ಮಾಡಿ ಎಂದು ತಿಳಿಸತರಕ್ಕಂತಹ ರೈತನ ಮಗ ಬೇಕು ಎನ್ನುವ ಉದ್ದೇಶದಿಂದ ಚೌದರಿ ದೇವಿಲಾಲ್ ರವರು ಹೇಳಿದರು. ಅದಕ್ಕೆ ವ್ಯಂಗ್ಯವಾಗಿ ಮಾತನಾಡಿದರು. ಈ ದೇಶದಲ್ಲಿ ಬಹಳ ವ್ಯಂಗ್ಯ. ಹೈಕೋರ್ಟಿನ ಜಡ್ಜಸ್ ರೈತರ ಮಕ್ಕಳು ಇರಬೇಕು. ಹೌದು ಇರಬೇಕು. ಏಕೆ ಇರಬೇಕು? ಅವನ ಸಮಸ್ಯೆಗೆ ನೋಡಿ ನಿರ್ಣಯವನ್ನು ಕೊಡುವಂತಹವನು ಇರಬೇಕು. ಆದ್ದರಿಂದ ಅವರು ಅಂಬಾಸಿಡರ್ ರೈತರ ಮಕ್ಕಳು ಇರಬೇಕು ಎಂದು ಹೇಳಿದಾಗ ಇವನೊಬ್ಬ ಹುಚ್ಚ, ಹೇಳಿದರು ಕೆಲವರು. ಅಂದರೆ ಇವತ್ತು ಇಡೀ ಪ್ರಪಂಚದಲ್ಲಿ ನಮ್ಮಲ್ಲಿ ಬೆಳೆಯುವಂತಹ ಕರ್ಬೂಜದ ಹಣ್ಣು 10-12ರೂ ಇದ್ದರೆ, ಅಲ್ಲಿ 100-120 ರೂಪಾಯಿ ಇದೆ. ನಮ್ಮಲ್ಲಿ ಮ್ಯಾನ್ಯುಯಲ್ ಲೇಬರ್ ಚೀಪ್ ಇದೆ. ಪ್ರಕೃತಿದತ್ತವಾದ ಕೆಲವು ಸವಲತ್ತುಗಳು ಇವೆ. ಇಲ್ಲಿ ವರ್ಷದಲ್ಲಿ 9 ತಿಂಗಳು, 10 ತಿಂಗಳು ಅಥವಾ 12 ತಿಂಗಳೂ ನಮ್ಮ ಕರ್ನಾಟಕದಲ್ಲಿ ವ್ಯವಸಾಯ ಮಾಡಬಹುದು. ಒಂದು ಕಡೆ ಬೇಸಿಗೆಯಲ್ಲಿ ಭೂಗರ್ಭದಲ್ಲಿ ನೀರನ್ನು ತೆಗೆದು, ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ವರ್ಷದ 12 ತಿಂಗಳೂ ಮಾಡಬಹುದು. ಅಲ್ಲೆಲ್ಲೋ ಕೆಲವು ಕಡೆ ಹಿಮ ಬಿದ್ದು, ವರ್ಷದಲ್ಲಿ 9 ತಿಂಗದಳು, 8 ತಿಂಗಳು, 6 ತಿಂಗಳು ಹೊರಗೆ ಬರುವುದಕ್ಕೇ ಆಗುವುದಿಲ್ಲ. ಆ ಸ್ಥಿತಿ ಇಲ್ಲ ಇಲ್ಲಿ. We can ccompete with the entire global market. ನಮ್ಮ ರೈತರಿಗೆ ಸಹಾಯ ಮಾಡೋಣ. ಇದೊಂದು ವಿಷಯದಲ್ಲಿ ಹೇಳುತ್ತೇನೆ. ಇನ್ನು ಮುಂದಕ್ಕೆ ಆ 180 ಕೋಟಿ ಟ್ಯಾಕ್ಸ್ ಏನು ಹಾಕಿದ್ದಾರಲ್ಲಾ, ಈ ಜಗಳ ಒಬ್ಬರಿಗೊಬ್ಬರಿಗೆ ಸಂಘರ್ಷ, ಅದರ ಬಗ್ಗೆ ಅವರನ್ನು ಕರೆಯಿಸಿ ಮಾತನಾಡಿ ಯಾವುದಾದರೊಂದು ಕಟ್ ಆಫ್ ದೇಟ್ ನಿಂದ ಅದನ್ನೂ ಕೂಡ ಯೋಚನೆ ಮಾಡಿ ಅದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕೆಂಬುದು ಮನಸ್ಸಿನಲ್ಲಿ ಇದೆ. ಆದರೆ ಇಲ್ಲಿಂದ ಮುಂದಕ್ಕೆ ಇದನ್ನು ಹೀಗೆ ಬಿಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರು ಇವತ್ತು ನಮ್ಮ ರೈತ ನೀರನ್ನು ತೆಗೆದುಕೊಳ್ಳುತ್ತಾನೋ ಆ ರೈತ ನನ್ನ ಮೇಲೆ ಸ್ವಲ್ಪ ಹೊರೆ ಹೊರಲೇಬೇಕಾಗುತ್ತದೆ. ಅದು ಈ ನಾಡಿನ ಜಲ ಸಂಪತ್ತನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳುವ ದೃಷ್ಟಿಯಿಂದ. ಇದರಲ್ಲಿ ಹಿಂದೆ ಬೀಳುವುದಕ್ಕೆ ಸಾಧ್ಯ ಆಗುವುದಿಲ್ಲ. ಜೊತೆಗೆ ರೈತ ಕೂಡ ಅರ್ಥ ಮಾಡಿಕೊಳ್ಳಬೇಕು. ಇವತ್ತು ಅವನ ಭೂಮಿ ಯಲ್ಲಿ ಪ್ರೊಡಕ್ಟಿವಿಟಿ ಹೆಚ್ಚಾಗುತ್ತದೆ. ಎಕ್ಸ್‌ಪರಿಮೆಂಟ್ ಸಾಕಷ್ಟು ಮಾಡಿದ್ದಾರೆ. 4 ಸೇರು ಭತ್ತದಲ್ಲಿ ಬಿತ್ತನೆ ಮಾಡಿ ಒಂದು ಎಕರೆಗೆ ನಾಟಿ ಮಾಡುತ್ತೇವೆ. ಅದೇ ನಮ್ಮ ತಂದೆ ಕಾಲದಲ್ಲಿ ನಿಮ್ಮ ತಂದೆ ಕಾಲದಲ್ಲಿ 50 ಸೇರು ಹಾಕುತ್ತಿದ್ದೆವು. ಅಭ್ಯಾಸ ಆಗಲಿಲ್ಲವೇ ನಮಗೆ? ಸಾಕಷ್ಟು ರೀಸರ್ಚ್ ಮಾಡುತ್ತಿದ್ದಾರೆ. ಆದರೆ ಇನ್ನೂ ಸಾಲದು. ಮುಂದೋಗೋಣ. ಆದರೆ ಇದನ್ನು ಇದೇ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರೊಡಕ್ಟಿವಿಟಿ ಹೆಚ್ಚು ಮಾಡಬೇಕಾಗುತ್ತದೆ. ನೀರನ್ನು ಕಡಿಮೆ ಉಪಯೋಗ ಮಾಡಬೇಕಾಗುತ್ತದೆ. ಭೂಮಿಯ ಗುಣಾಂಶವನ್ನೂ ಕೂಡ ನಾವು

ಉಳಿಸಿಕೊಳ್ಳಬೇಕಾಗುತ್ತದೆ. ಸೆಲಿನಿಟಿ ಬಂದು ಹಾಳಾಗುವುದಕ್ಕೆ ಬಿಡುವುದಕ್ಕಾಗುವುದಿಲ್ಲ. ಆದ್ದರಿಂದ ಹೆಚ್ಚು ಪ್ರದೇಶದ ಜನಕ್ಕೆ ಸೌಲಭ್ಯ ಕೊಡಬಹುದೆಂಬ ಸದುದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ಇಲ್ಲಿ ಏನಾದರೂ ನ್ಯೂನತೆಗಳು ಬಂದರೆ, ನಿಮ್ಮನ್ನು ಕೇಳಿ ಸರಿ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ನಿಮ್ಮ ಸಹಕಾರ ಬೇಕು. ಇದನ್ನು ಒಪ್ಪೋಣವೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ" ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮುಖ್ಯ ಮಂತ್ರಿಗಳು ವಾಟರ್ ಮೈಂಟೇನೆನ್ಸ್ ರೈತರನ್ನು ಎಜ್ಯುಕೇಟ್ ಮಾಡುವುದರಲ್ಲಿ ನಮ್ಮದು ಯಾರದ್ದು ವಿರುದ್ಧವಿಲ್ಲ. ಆದರೆ ತೆರಿಗೆ ಹಾಕುವುದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ರೈತ ಸಂಘದ ಸದಸ್ಯರಾದ ಶ್ರೀ ಪುಟ್ಟಣ್ಣಯ್ಯನವರು ಸಭಾ ತ್ಯಾಗ ಮಾಡಿದರು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುರುದು

"ಖಂಡ - 2"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಖಂಡ 2 " ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ,

"1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು " ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

8.30 ಪಿ.ಎಂ.

5. ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ 1995

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 1995ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಪುರಸಭೆಗಳ ವಿಧೇಯಕಕ್ಕೆ ಕೆಲವು ಅಮೆಂಡ್‌ಮೆಂಟ್‌ಗಳನ್ನು ತರಲಾಗಿದೆ. ಈ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ 1995 - ಇದರ ಮುಖ್ಯ ಉದ್ದೇಶ ಪಟ್ಟಣಗಳಲ್ಲಿ ಬಹಳಷ್ಟು ಕಾರ್ಪೊರೇಷನ್ ಓಪನ್ ಲ್ಯಾಂಡ್ಸ್, ಮಿಸ್‌ಯೂಸ್ ಆಗುತ್ತಿದೆ. ಬಹಳಷ್ಟು ಕಡೆ ಎನ್‌ಕ್ರೋಚ್‌ಮೆಂಟ್ ಆಗುತ್ತಿದೆ. ಬಹಳಷ್ಟು ಕಡೆ ಫಾಲ್ಸ್ ಖಾತಾ ನಿರ್ಮಾಣ ಮಾಡಿ ಎನ್‌ಕ್ರೋಚ್ ಮಾಡುತ್ತಿದ್ದಾರೆ. ಈ ತರಹ ಪಟ್ಟಣಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಎಲ್ಲಾ ಕಡೆ ಏನು ಈ ತರಹ ಓಪನ್‌ಲ್ಯಾಂಡ್, ಕಾರ್ಪೊರೇಷನ್ ಭೂಮಿ, ಪ್ರಾಪರ್ಟಿ ಇದೆ, ಖಾಸಗಿ ಜನರು ಇದನ್ನು ಎನ್‌ಕ್ರೋಚ್ ಮಾಡಿ ಸಂಪೂರ್ಣವಾಗಿ ಮುಗಿಸುತ್ತಿದ್ದಾರೆ. ಇದನ್ನು ತಡೆಯುವುದಕ್ಕೆ ಕಾರ್ಪೊರೇಷನ್ ಆಯಕ್ಟ್‌ನಲ್ಲಿ ಯಾವುದೇ ಪ್ರಾವಿಷನ್ ಇಲ್ಲ, ಇದನ್ನು ತಡೆಯಬೇಕಾದರೆ ಸಿವಿಲ್ ಕೋರ್ಟಿಗೆ ಹೋಗಬೇಕು; ಅನೇಕ ಜನರ ಖಾತಾದಲ್ಲಿ ಎಲ್ಲಿ ಓಪನ್‌ಸ್ಪೇಸ್ ಇದೆಯೋ ಅಲ್ಲಿ ಯಾವುದೋ ಒಂದು ಶೆಡ್ ಹಾಕುತ್ತಾರೆ, ಮತ್ತೊಂದು ಹಾಕುತ್ತಾರೆ. ಹೀಗೆ ಮಾಡಿ ಖಾತದಲ್ಲಿ ರಾಂಗ್ ಎಂಟ್ರಿ ಮಾಡಿಸಿರುತ್ತಾರೆ. ಅದನ್ನು ಚಾಲೆಂಜ್ ಮಾಡುವುದಕ್ಕೆ ಅದು ಬೋಗಸ್ ಇದೆ, ಎಂದು ಕಾರ್ಪೊರೇಷನ್ ಕಮೀಷನರ್ ಅವರಿಗೆ ಯಾವುದೇ ರೀತಿಯ ಜೆನ್ಯೆನ್ ಡಾಕ್ಯುಮೆಂಟ್ ಇದೆ, ಅದನ್ನು ಕೇಳುವ ಸಲುವಾಗಿ ಪ್ರಾವಿಷನ್ ಇರಲಿಲ್ಲ. ಬೋಗಸೆ ಡಾಕ್ಯುಮೆಂಟ್‌ನ್ನು ಏನು ಕ್ರಿಯೇಟ್ ಮಾಡುತ್ತಾರೆ, ಅಥವಾ ಟ್ರಾನ್ಸಫರ್ ಮಾಡುತ್ತಾರೆ, ಈ ತರಹ ಕಾರ್ಪೊರೇಷನ್ ಏರಿಯಾದಲ್ಲಿ ಬರತಕ್ಕಂಥ ಪ್ರಾಪರ್ಟಿಯನ್ನು ಖಾಸಗಿ ಜನರು ಎನ್‌ಕ್ರೋಚ್ ಮಾಡುತ್ತಿದ್ದಾರೆ; ಗ್ರಾಬ್ ಮಾಡುತ್ತಿದ್ದಾರೆ. ಈಗ ಈ ಆಯಕ್ಟ್‌ನಲ್ಲಿ ಪ್ರೈವೇಟ್ ಪ್ರಾಪರ್ಟಿ ಅಥವಾ ಕಾರ್ಪೊರೇಷನ್ ಪ್ರಾಪರ್ಟಿ ಇದ್ದರೂ ಕೂಡ ಡಿಸ್‌ಪ್ಯೂಟ್ ಬಂದನಂತರ ಯಾವರೀತಿ ಮಾಡಬೇಕು ಎಂದು ಅದರ ಸಲುವಾಗಿ ಡಿವಿಜನಲ್ ಕಮೀಷನರ್ ಅವರಿಗೆ ಒಂದು ಅಥಾರಿಟಿ ಹಕ್ಕನ್ನು ಕೊಡಲಾಗಿದೆ. ಅವರು ಅಪ್ರೂವಲ್ ಹೇಗೆ ಮಾಡಬೇಕು, ಪ್ರೈವೇಟ್ ಪಾರ್ಟಿಯಾಗಲಿ, ಅಥವಾ ಕಾರ್ಪೊರೇಷನ್‌ದವರಾಗಲೀ ಈ ಪ್ರಾಪರ್ಟಿ ಯಾರಿಗೆ ಸಂಬಂಧಪಟ್ಟಿದ್ದು, ಅದರ ನಂತರ ಅಪಿಲೇಟ್ ಟ್ರಿಬ್ಯೂನಲ್ ಕೂಡ ಇದೆ. ಈ ಎಲ್ಲಾ ಪ್ರಾವಿಷನ್‌ಗಳು ಈಗಿರತಕ್ಕಂಥ ಕಾರ್ಪೊರೇಷನ್ ಆಯಕ್ಟ್‌ನಲ್ಲಿ ಇಲ್ಲ. ಈ ದೃಷ್ಟಿಯಿಂದ ಕಾರ್ಪೊರೇಷನ್ನಿನ ಸಾರ್ವಜನಿಕ ಪ್ರಾಪರ್ಟಿಯನ್ನು ಉಳಿಸುವ ಸಲುವಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಈ ದೃಷ್ಟಿಯಿಂದ ಈ ಸಭೆಗೆ ತಮ್ಮ ಮುಖಾಂತರ ಈ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಹೇಳಿದರು, ಈ ಎನ್‌ಕ್ರೋಚ್‌ಮೆಂಟ್‌ನ್ನು ತಪ್ಪಿಸುವುದಕ್ಕೆ ಸಲುವಾಗಿ ಈ ಬಿಲ್‌ನ್ನು